UNIVERSAL LIBRARY
OU_200763
UNIVERSAL LIBRARY

## ಈ ಕವಿಯ ಇತರ ಗ್ರಂಥಗಳು

### ಕವನಸಂಗ್ರಹ

ಹಣತೆ

ಮಾಂದಳಿರು

ಶಾರದ ಯಾಮಿನೀ

ಗಣೇಶ ದರ್ಶನ

### ನಾಟಕ

ಅಹಲ್ಯೆ

ಕವಿ ಮತ್ತು ದೋಣಿಯ ಬಿನದ

ಗೋಕುಲ ನಿರ್ಗಮನ

ಶಬರಿ

ವಿಕಟ ಕವಿ ವಿಜಯ

ಕನ್ನಡಕವಿ ಕಾವ್ಯಮಾಲೆ–೨೨

# ರಸಸರಸ್ವತಿ
ಮತ್ತು
# ಇತರ ಕವನಗಳು

ಪು. ತಿ. ನರಸಿಂಹಾಚಾರ್

ಶಾರದಾ ಮಂದಿರ
ಕೃಷ್ಣರಾಜವನಂ, ಮೈಸೂರು

ಈ ಮಾಲೆಯ ಸಂಪಾದಕರು ಮತ್ತು ಪ್ರಕಾಶಕರು :

ಎಚ್. ಎಂ. ಶಂಕರನಾರಾಯಣ ರಾವ್, ಎಂ. ಎ.

ಕನ್ನಡ ಅಧ್ಯಾಪಕರು, ಶಾರದಾವಿಲಾಸ ಕಾಲೇಜು, ಮೈಸೂರು

ಮೊದಲನೆಯ ಮುದ್ರಣ ೧೯೫೪

ಎಲ್ಲ ಹಕ್ಕುಗಳೂ ಗ್ರಂಥಕರ್ತರಿಗೆ ಸೇರಿವೆ

ಬೆಲೆ :

ಸಾಧಾರಣ ಪ್ರತಿ ೧—೮—೦

ಕ್ಯಾಲಿಕೋ ಪ್ರತಿ ೨—೮—೦

ಮುದ್ರಕರು :

ಜಿ. ಎಚ್. ರಾಮರಾವ್

ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್,

ಮೈಸೂರು

# ಮೊದಲ ಮಾತು

ಈ ಕವನಸಂಗ್ರಹದಲ್ಲಿ ನಾನು ಕಳೆದ ಏಳೆಂಟುವರ್ಷಗಳಲ್ಲಿ ಆಗಾಗ ಬರೆದ ಕವನಗಳು ಸೇರಿವೆ. ಇವುಗಳಲ್ಲಿ ಬಹುಭಾಗ ಪತ್ರಿಕೆಗಳಲ್ಲಿ ಅಚ್ಚಾಗಿ ಓದುಗರ ಕಣ್ಣುಮುಂದೆ ಹಾದುಹೋಗಿದೆ. ಈ ಪದ್ಯಗಳನ್ನು ಒಟ್ಟುಗೂಡಿಸಿ ಈ ಸಂಗ್ರಹವನ್ನು ತರುವ ಉದ್ದೇಶ ಇಷ್ಟು ಶೀಘ್ರವಾಗಿ ನೆರವೇರುತ್ತದೆಂದು ನಾನೆಣಿಸಿರಲಿಲ್ಲ. ತರುಣ ಮಿತ್ರರು ಈ ಕಾರ್ಯದಲ್ಲಿ ವಿಶೇಷವಾದ ಆಸಕ್ತಿವಹಿಸಿದ್ದರಿಂದ ಈ ಪ್ರಕಟನೆ ಸಾಧ್ಯವಾಯಿತು. ಈ ಕವನಗಳನ್ನು ಆಗಾಗ ಪ್ರಕಟಿಸಿ ನನ್ನನ್ನು ಬಹುಮಾನಿಸಿದ ಪತ್ರಿಕೆಗಳ ಮಾನ್ಯ ಸಂಪಾದಕರಿಗೂ ಮತ್ತು ಈ ಪುಸ್ತಕದ ವಿಚಾರವಾಗಿ ನನಗೆ ಉತ್ಸಾಹವನ್ನು ಕೊಟ್ಟು ಈ ಕಾರ್ಯದಲ್ಲಿ ನೆರವಾದ ಮಿತ್ರರಿಗೂ ಪ್ರಕಾಶಕರಿಗೂ ನಾನು ಬಹು ಕೃತಜ್ಞನಾಗಿದ್ದೇನೆ.

ಪದ್ಯರಚನೆಯ ಕಲೆಯ ವಿಚಾರದಲ್ಲಿ ಜಿಜ್ಞಾಸೆ ನಡೆಯುತ್ತಿರುವ ಈ ಸಮಯದಲ್ಲಿ ಕಾವ್ಯವನ್ನು ಕುರಿತು ನನ್ನ ಈಗಿನ ನಿಲವೇನೆಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳಬೇಕೆಂದೆನಿಸುತ್ತದೆ. ಕಾವ್ಯದ ಜೀವಾಳ ವಸ್ತುವಿನಲ್ಲಿದೆಯೇ, ಸಂವಿಧಾನದಲ್ಲಿದೆಯೇ, ರೂಪದಲ್ಲಿದೆಯೇ, ಶೈಲಿಯಲ್ಲಿದೆಯೇ, ಪದಪ್ರಯೋಗಚಾತುರ್ಯದಲ್ಲಿಯೇ, ಅಥವಾ ಇವೆಲ್ಲವುಗಳ ಉಚಿತ ಸಮವಾಯದಲ್ಲಿಯೇ—ಈ ರೀತಿ ಜಿಜ್ಞಾಸೆಯೇಳುವುದು ಸಹಜ. ಇದನ್ನು ಆಲೋಚಿಸುತ್ತಾ ಆಲೋಚಿಸುತ್ತಾ ಇವುಗಳಲ್ಲಾವುದರಲ್ಲೂ ಕಾವ್ಯ ರಹಸ್ಯವಡಗಿರುವಂತೆ ನನಗೆ ತೋರುತ್ತಿಲ್ಲ. ಕಾವ್ಯದ ಉತ್ಪತ್ತಿಗೆ ಕವಿಗೆ ಹುಟ್ಟಿನಿಂದಲೇ ಪ್ರಾಪ್ತವಾದ ಎರಡು ಗುಣಗಳಿರಬೇಕೆಂದು ತೋರುತ್ತದೆ. ಭವದ ತೀವ್ರಸಂವೇದನಾರೂಪವಾದ ಪ್ರಜ್ಞೆ—ಇದನ್ನು ಬೇಕಾದರೆ ಭವನಿಮಜ್ಜನಚಾತುರ್ಯ ಎಂದು ಕರೆಯಬಹುದು—ಮತ್ತು ಆ ನಿಮಗ್ನತೆಯಿಂದ ಪಾರಾಗಿ ಬೇರೆಯಾಗಿ ನಿಲ್ಲುವ ಲಘಿಮಾ ಕೌಶಲ; ಈ ಎರಡು ಗುಣಗಳು ಕವಿಗಿದ್ದ ಹೊರತು ಕಾವ್ಯ ಸಿದ್ಧಿಸಲಾರದು. ಮಿಕ್ಕ ಗುಣಗಳು ಅಭ್ಯಾಸ ಮತ್ತು ಪರಿಶ್ರಮದಿಂದ ಲಭ್ಯವಾಗ

ತಕ್ಕವು. ಒಂದು ಚೇತನದಲ್ಲಿ ಭವದ ಧರ್ಮಾರ್ಥಕಾಮಸಂಬದ್ಧವಾದ ಆಕರ್ಷಣೆಗೂ ಮುಕ್ತಿಯ ವಿಕರ್ಷಣೆಗೂ ಉಂಟಾಗುವ ಘರ್ಷಣದಿಂದ ಕಾವ್ಯ ಹುಟ್ಟುತ್ತದೆ, ಕಲೆ ಉದಿಸುತ್ತದೆ. (ಇದನ್ನು ಘರ್ಷಣವೆಂದು ಕರೆಯುವುದಕ್ಕಿಂತ ಈ ವಿರುದ್ಧಶಕ್ತಿಗಳ ಸತತಸಾಹಚರ್ಯವೆಂದರೆ ಮೇಲೇನೋ.) ಪರಸ್ಪರಾಶ್ರಯಗಳಾದ ಈ ಎರಡು ಶಕ್ತಿಗಳೂ ಒಂದು ಚೇತನದ ಮೇಲೆ ಸಂತತವಾದ ಪ್ರಭುತ್ವವನ್ನು ನಡೆಸುತ್ತಾ ಒಂದನ್ನೊಂದು ಅತಿಕ್ರಮಿಸದಂತೆ, ಮುಕ್ತಿಯ ವಿಕರ್ಷಣೆ ಪ್ರಚುರವಾಗಿ ಭವದಾಕರ್ಷಣೆ ಅದನ್ನು ತನ್ನೆಡೆಗೆ ನಿರಂತರವಾಗಿ ಜಗ್ಗುತ್ತಾ, ಇಂಥ ತುಯ್ತಗಳ ಆಯಕಟ್ಟಿಗೆ ಸಿಕ್ಕಿದ ಜೀವಾತ್ಮಸಂಸ್ಥೆ ಕಾವ್ಯಕ್ಕೂ ಕಲೆಗೂ ಮಾತೃಕೆಯಾಗುತ್ತದೆ. ಕವಿಯಲ್ಲಿ ಪ್ರಚುರವಾಗಿರುವುದು ಮುಕ್ತಿಯ ಆಸೆ. ಈ ಆಸೆ ಅರ್ಥಕಾಮ ಸಮೃದ್ಧವಾಗಿ ಧರ್ಮಸಂಯಮಿತವಾದ ಭವದಲ್ಲಿ ಮಾತ್ರ ಹುಟ್ಟೀತು. ಆದುದರಿಂದ ಭವದ ಸೆಳೆತವಿಲ್ಲದೆ ಕಾವ್ಯ ಹುಟ್ಟಲಾರದು ನಿಜ; ಆದರೂ ಅದರಿಂದ ಫಲಿಸತಕ್ಕದ್ದು ಮಾತ್ರ ಭವಪ್ರಶಮನ ಮತ್ತು ಆ ಬಿಡುಗಡೆಯಿಂದ ಉಂಟಾಗುವ ಉಲ್ಲಾಸ. ತಾನು ಏತರ ಪ್ರಶಮನವೆಂದೂ, ತನ್ನದು ಏತರಿಂದ ಮುಕ್ತಿಯೆಂದೂ ಅನಿವಾರ್ಯವಾಗಿ ತೋರುವ ಮಟ್ಟಿಗೆ ಅದು ಭವದ ಪ್ರತೀಕವಾಗುತ್ತದೆ, ಅಷ್ಟೆ. ಭೂಮಿಗೆ ಸೌಮ್ಯೋಪಗ್ರಹದಂತೆ, ಭವಕ್ಕೆ ಕವಿಯ ಕಾವ್ಯ. ಯಾವ ಉದ್ವೇಗದ ಆಕರ್ಷಣೆಗೂ ಸಿಕ್ಕಿ ಕೆಳಕ್ಕೆ ಬೀಳದೆ ಅದರ ಸೆಳೆತಕ್ಕೆ ತನ್ನ ಗರ್ಭಪ್ರಾಪ್ತವಾದ ವಿಕರ್ಷಣಶಕ್ತಿಯನ್ನು ಮಾರೊಡ್ಡಿ ಮೇಲೆ ತೇಲುತ್ತಾ ಭವದ ಸುತ್ತ ಪರಿಭ್ರಮಿಸುವ ಆತ್ಮ ಸುಧಾಂಶುಗಳು ಕವಿಯ ರಚನೆಗಳು.

ಈ ಮುಕ್ತಿಪ್ರಾಚುರ್ಯವಿಲ್ಲದಿದ್ದರೆ ಲಭಿಸುವುದು ಪ್ರಚಾರ ಸಾಹಿತ್ಯ, ಪ್ರಚೋದಕ ಸಾಹಿತ್ಯ, ಪ್ರಬೋಧನ ಸಾಹಿತ್ಯ; ಈ ಸಾಹಿತ್ಯದಿಂದ ಪ್ರಯೋಜನವಿಲ್ಲವೆಂದಲ್ಲ, ಅದನ್ನು ನಿರ್ಮಿಸತಕ್ಕಂಥವರು ಬೆಲೆಯಿಲ್ಲದವರೆಂದಲ್ಲ. ಸತ್ಕಾವ್ಯದಲ್ಲೂ ಈ ಅಂಶಗಳಿದ್ದೇ ಇವೆ; ಕಾಲಾನುಗುಣ್ಯವಾಗಿ ಅವುಗಳಿಗೆ ಪ್ರಾಮುಖ್ಯವೂ ಬರುತ್ತದೆ, ನಿಜ. ಆದರೆ ಅವುಗಳಿಗೆ ಅಲ್ಲಿ ಪ್ರಾಚುರ್ಯವಿಲ್ಲ; ಕವಿಯ ಭವಪ್ಲವನಶಕ್ತಿ ಅವುಗಳಿಂದ ಕುಂಠಿತವಾಗಿಲ್ಲ; ಕುಂಠಿತವಾಗಿದ್ದರೆ ಅವಕ್ಕೆ ಕಾವ್ಯತ್ವ ಸಿದ್ಧಿಸದು. ವಾದವಿಷ್ಟೆ—ಧರ್ಮಾರ್ಥ

ಕಾಮಗಳನ್ನು ಕುರಿತು ನೇರವಾಗಿಯೂ, ಅವುಗಳ ತೊಡಕಿನಲ್ಲೇ ರಮಿಸು ವಂತೆಯೂ ಸಾಹಿತ್ಯವನ್ನು ನಿರ್ಮಿಸತೊಡಗುವವರು ಶಾಸಕರ, ಶೂರರ, ಧರ್ಮಪ್ರವರ್ತಕರ, ಅರ್ಥಪ್ರಚೋದಕರ, ಕಾಮಪ್ರಬೋಧಕರ ಗುಂಪಿಗೆ ಸೇರತಕ್ಕವರು; ಅವರಿಂದ ಭವಕ್ಕೆ ನೇರವಾದ ಪ್ರಯೋಜನವುಂಟು, ಪ್ರಚೋದನೆಯುಂಟು. ಅವರ ವೃದ್ಧಿ ಮತ್ತು ಹ್ರಾಸಗಳಿಗೆ ಅವರು ನೇರ ವಾಗಿ ಸಂಬಂಧಪಟ್ಟವರು. ಈ ಪ್ರಚೋದನೆಗಳಿಂದ ಕವಿಗೂ ಪ್ರಯೋ ಜನ ಪ್ರಚೋದನೆಗಳಿಲ್ಲದಿಲ್ಲ. ಆಕರ್ಷಣದಿಂದ ವಿಕರ್ಷಣ ಹುಟ್ಟಿಕೊಳ್ಳ ತಕ್ಕದ್ದು ಪ್ರಕೃತಿ ನಿಯಮ. ಅಣುವಿನಿಂದ ಹಿಡಿದು ಗ್ರಹತಾರಾವಲಯ ದವರೆಗೂ ಹರಡಿ ವಿಶ್ವವ್ಯಾಪಿಯಾಗಿ ಅದರ ಪರಿಭ್ರಮಣಕ್ಕೆ ಮೂಲವಾ ಗಿರುವ ಈ ನಿಯಮ ಚೇತನವ್ಯಾಪಿಯಾಗಬೊಲ್ಲದೇಕೆ? ಕವಿಗಳಲ್ಲಿ ಅತ್ಯಂತ ಶ್ರೇಷ್ಠನಾದ ಕಾಳಿದಾಸನು ತನ್ನ "ಮಾಲವಿಕಾಗ್ನಿಮಿತ್ರ" ದ ಮಂಗಲ ಶ್ಲೋಕದಲ್ಲಿ ಮಾಡಿರುವ ಈಶ್ವರನ ವರ್ಣನೆಯಲ್ಲಿ ನಾವು ಕಾಣು ವುದೇನು—ಈ ಮಹಾ ಶಕ್ತಿಗಳ ಬಹು ಮೋಹಕವಾದ ಮತ್ತು ಮುಕ್ತಿ ಪ್ರಚುರವಾದ ಸಾಹಚರ್ಯವನ್ನಲ್ಲದೆ ? ಸಕಲೈಶ್ವರ್ಯಸಂಪನ್ನವಾಗಿದ್ದರೂ ವೈಭವಾಸಕ್ತಿಯಿಲ್ಲ, ಸಕಲಭೋಗವಸ್ತುಗಳಿಂದ ಕೂಡಿದ್ದರೂ ಇಂದ್ರಿ ಯಾರಾಮತೆಯಿಲ್ಲ, ಜಗತ್ತನ್ನೇ ಭರಿಸತಕ್ಕ ಸಾಮರ್ಥ್ಯವಿದ್ದರೂ ನಿರಹಂ ಕಾರವಾದದ್ದು–ಇಂಥ ಸಮೃದ್ಧ ಜೀವನದ ಜನಪದ ಮಾತ್ರ ಯೋಗಿಸಿದ್ಧ ಸಂತರಿಂದ ಸೇವ್ಯವಾಗಿ ಕವಿಚಂದ್ರಚೂಡವಾಗಬಲ್ಲುದು. ಅದರ ಪರಿಚರ್ಗ್ಯೆ ಯಲ್ಲಿರುವ ಸತ್ವಶಾಲಿಗಳು ತಮ್ಮ ಭವಶ್ರಮವನ್ನು ಆ ತನಿವೆಳಗಿನಿಂದ ಪರಿ ಹರಿಸಿಕೊಂಡು ತಮ್ಮ ಕರ್ತವ್ಯಶ್ರದ್ಧೆಯನ್ನೂ ಉತ್ಸಾಹವನ್ನೂ ಬೆಳಸಿಕೊಳ್ಳ ಬಹುದು. ಐಶ್ವರ್ಯಸಂಪನ್ನವಾಗಿ, ಭೋಗವಸ್ತುನಿಬಿಡವಾಗಿ, ಮಹಾಸತ್ವ ವುಳ್ಳದ್ದಾಗಿದ್ದರೂ ತತ್ತದ್ ವೃದ್ಧಿಯಲ್ಲೇ ಆಸಕ್ತವಾದಜನತೆಯಲ್ಲಿ ಸತ್ಕಾವ್ಯ ಹುಟ್ಟಲಾರದು—ಅದು ಸ್ವಲ್ಪ ಮಟ್ಟಿಗಾದರೂ ಭವವಿಮುಖತೆಯನ್ನು ಪಡೆಯುವತನಕ. ಕವಿ ಒಂದು ಜನಾಂಗದ ಭವಪ್ರವೃತ್ತಿಶಕ್ತಿಯ ಪ್ರತೀಕವಲ್ಲ; ಅದರಲ್ಲಿ ನಿವೃತ್ತಿಶಕ್ತಿ ಪ್ರಚುರವಾಗುವ ಕಾಲದಲ್ಲಿ ಆ ಪ್ರವೃತ್ತಿ ಮತ್ತು ನಿವೃತ್ತಿ ಶಕ್ತಿಗಳ ಸಾಮರಸ್ಯದ ಪ್ರತೀಕ. ಆತನ ಗುರಿ ಭವೋದ್ವೇಗಪ್ರಚೋದನೆಯಲ್ಲ, ಭವಾವೇಗಪ್ರಶಮನ. ಧರ್ಮಾರ್ಥ

ಕಾಮಗಳ ಮೇಲೆ ಆತನ ಪ್ರಭುತ್ವವಿಲ್ಲ. ಬಾಳಿನ ಏಳಿಗೆಬೀಳವೆಗ ಆತನ ಕವಿಗುಣ ನೇರವಾಗಿ ಸಂಬಂಧಪಟ್ಟಿದಲ್ಲ. ಅರ್ಥಕಾಮಗಳು ಹದಗೆಟ್ಟು ಧರ್ಮಗ್ಲಾನಿಯಾದಾಗ ಜಗತ್ತು ಭಗವದವತಾರಕ್ಕೆ ಬಯಸುತ್ತದೆಯೇ ಹೊರತು ಕವಿಗಲ್ಲ. ಆ ಮಹದವತಾರದಿಂದ ಅರ್ಥಕಾಮಗಳು ಹದಕ್ಕೆ ಬಂದು ಧರ್ಮದ ಸತ್ವವೃದ್ಧಿಯಾಗಿ ಜೀವನ ಸಮೃದ್ಧವಾದ ಮೇಲೆ ಕವಿಸಂಭೂತಿ, ಕಾವ್ಯೋದಯ. ಆ ಅವತಾರಸೂರ್ಯನ ತೇಜಸ್ಸನ್ನು ತನ್ನಲ್ಲಿ ಸಂಯಮಿಸಿ, ಮರಳಿ ಈ ಭವದ ಮೇಲೆ ಸ್ಮೃತಿರೂಪವಲ್ಲಿ ಚೆಲ್ಲುವುದಕ್ಕಾಗಿ ಆ ಭವವೇ ಕವಿಯನ್ನು ಕಲ್ಪಿಸಿಕೊಳ್ಳುತ್ತದೆ—ತಕ್ಕ ಕಾಲದಲ್ಲಿ.

ಹೀಗೆ ಕಾವ್ಯದ ಪ್ರಮುಖಗುಣ ಭವೋದ್ವೇಗಪ್ರಶಮನವಾದುದರಿಂದ ಅದರ ವಸ್ತುವೆಂಥದಾದರೂ ಅದಕ್ಕೆ ಅಶ್ಲೀಲತೆಯ ಸೋಂಕಿಲ್ಲ, ಸಹೃದಯರ ಮನಸ್ಸನ್ನು ಎಲ್ಲ ತೊಡಕಿನಿಂದಲೂ ಬಿಡಿಸಿ ಬಿಡುಗಡೆಯಲ್ಲಿ ನೆಲೆಗೊಳಿಸುವುದರಲ್ಲಿ ಸತ್ಕಾವ್ಯವು ತನ್ನ ಸಾರ್ಥಕ್ಯವನ್ನು ಪಡೆಯುತ್ತದೆಯಾದುದರಿಂದ. ಆ ಕಾರಣದಿಂದಲೇ ವಿಷಯೋದ್ಭವವಾದ ಜುಗುಪ್ಸೆಯೂ ಕಾವ್ಯದಲ್ಲಿ ತಿಳಿಮೆಗೊಂಡು ಭೋಗ್ಯರಸಪದವಿಗೇರುತ್ತದೆ. ಗಂಧರ್ವನಾಗುವ ಕಬಂಧನಂತೆ—ಆ ಗಂಧರ್ವನಲ್ಲಿರುವುದು ತಾನು ಹಿಂದಿನ ಕಬಂಧನೆನ್ನುವಷ್ಟು ಕಬಂಧಾಂಶ; ಅಷ್ಟೆ. ಮಿಕ್ಕದ್ದೆಲ್ಲ ದಿವ್ಯವೇ. ಹೀಗೆಯೇ ಎಲ್ಲ ಉದ್ವೇಗಗಳಿಗೂ ಆಯಾ ರಸಸ್ಥಾನದಲ್ಲಿ ಮುಕ್ತಿ. ಈ ತಿಳಿಮೆಯಿಂದ ನಮಗೆ ಲಭಿಸುವುದು ಹೃದಯಶುದ್ಧಿ, ದರ್ಶನಶುದ್ಧಿ ಮತ್ತು ಭವದ ಸಂಯಕ್ ಜ್ಞಾನ. ಈ ನಿಲವನ್ನು ಮುಟ್ಟಿದ ಸರ್ವಭೂತ ಹೃದಯರಾದ ಮುಕ್ತಕವಿಗಳನ್ನು ಕುರಿತು 'ಶುನಿ ಚೈವ ಶ್ವಪಾಕೇ ಚ ಕವಯ ಸ್ಸಮದರ್ಶಿನಃ 'ಎಂದು ಗೀತಾವಾಕ್ಯವನ್ನು ಸ್ವಲ್ಪ ತಿದ್ದಿ ಹೇಳಿದರೂ ಸತ್ಯಕ್ಕೆ ಅಪಚಾರವಾಗಲಾರದು. ಆದುದರಿಂದ ವಸ್ತುವಿನಿಂದ ಕವಿತ್ವಕ್ಕೆ ಉನ್ನತಿಯಾಗಲಿ ಅವನತಿಯಾಗಲಿ ಲಭಿಸದು—ಆ ವಸ್ತುವಿನ ವಿಷಯದಲ್ಲಿ ಕವಿಯ ಮನಸ್ಸು ನಿಲ್ಲುವ ನೆಲೆಯ ಬೆಲೆಯಿಂದ ಆ ಕಾವ್ಯಕ್ಕೆ ಬೆಲೆ; ಕವಿ ತನ್ನ ಅನುಭವಗಳಿಂದ ತನ್ನನ್ನು ಪ್ರತ್ಯೇಕಿಸಿಕೊಂಡು ನಿಂತು ಅದನ್ನು ನಿರುಕಿಸುತ್ತಾ ನಮಗಾಗಿ ಬಣ್ಣಿಸುವ ಜಾಣ್ಮೆಯ ಮೇಲೆ ಅದರ ಬೆಲೆ ನಿಲ್ಲುತ್ತದೆ. ಕವಿಯ

ಕೌಶಲವಿರುವುದೀ ಎಡೆಯಲ್ಲಿ—ಭವದಲ್ಲಿ ಅಲಿಯಂತೆ ಮೈಗರೆದು, ಕಣದಂತೆ ಒಂದುಗೂಡಿ, ಸುದೂರದಲ್ಲಿ ತೋರಿ, ತಾನೆ ಅದು ಎಂಬಂತೆ ಹಾಗೂ ಅದಲ್ಲವೆಂಬಂತೆ ಯೋಗ್ಯೈಶ್ವರ್ಯವನ್ನು ಪ್ರದರ್ಶಿಸುವ ಚಾತುರ್ಯದಲ್ಲಿ.

ಹೀಗೆ ಕಣವಾಗಿ ಮೈಗೂಡಿಕೊಳ್ಳುವಾಗ ಕವಿಯ ಕಾವ್ಯ ತನಗೆ ಸಹಜವಾಗಿ ಪ್ರಾಪ್ತವಾಗಬಹುದಾದ ರೂಪವನ್ನು ತಳೆಯುತ್ತದೆ. ಈ ವಿಷಯದಲ್ಲಿ ಕವಿಯ ಮನಸ್ಸು ಪುಷ್ಪದ್ರುಮಗಳನ್ನು ಅನುಕರಿಸುತ್ತದೆ ಎನ್ನಬಹುದು. ಶರತ್ಕಾಲದಲ್ಲಿ ಹಸುರೆಲೆಗಳನ್ನು ಹಸರಿಸಿ ಸಮಸ್ತ ಭೋಗಗಳನ್ನೂ ಪಡೆಯುತ್ತಾ, ಶಿಶಿರದಲ್ಲಿ ತಾವು ಪಡೆದುದನ್ನು ಉಪಶಮಿಸಿ ಬೇರ್ಪಡಿಸಿಕೊಳ್ಳುವಾಗ ಶುಷ್ಕವಾಗುತ್ತಾ, ಮರಳಿ ವಸಂತದಲ್ಲಿ ತಮ್ಮನ್ನು ಯಾವ ವಿಷಯದಲ್ಲೂ ಹೋಲದ ಕುಸುಮಗಳ ಶೋಭೆಯನ್ನು ಮರಗಳು ತಾಳುವಂತೆ, ಕವಿಯೂ ಕೂಡ ಅನುಭವಗಳನ್ನು ಪಡೆಯುತ್ತಾ, ಸಂಯಮಿಸುತ್ತಾ, ಅವುಗಳಿಂದ ತನ್ನನ್ನು ಬಿಡಿಸಿಕೊಳ್ಳುತ್ತಾ, ಮರಳಿ ಕಾವ್ಯ ಕುಸುಮರೂಪದಲ್ಲಿ ಅವನ್ನು ಹೊರತೋರುವಾಗ ಅವಕ್ಕೆ ತಕ್ಕ ರಂಗು ರೂಪು ಕಂಪುಗಳು ಪ್ರಾಪ್ತವಾಗುತ್ತವೆ—ಅವು ಅವುಗಳ ದೋಹದದಂತೆ. ಬಣ್ಣದಲ್ಲಾಗಲಿ ರಚನೆಯಲ್ಲಾಗಲಿ ಹೂವು ಮರವನ್ನು ಹೋಲದೆಂದು ಯಾರೂ ಹೇಗೆ ದೂರುವುದಿಲ್ಲವೋ ಹಾಗೆಯೇ ಕಾವ್ಯ ಭವದ ವ್ಯಾವಹಾರಿಕ ಸತ್ಯಸ್ವರೂಪವನ್ನು ಅನುಕರಿಸಿ ಪ್ರತೀಕಿಸದಿದ್ದರೆ ಅದನ್ನು ಸ್ವಾದುವಲ್ಲವೆನ್ನುವುದು ಕುಶಲರಿಗೆ ತಕ್ಕುದಾಗದು. ಹಾಗೆಯೇ ಸಂಪಗೆ ನೀಳ್ದಿದೆಯೆಂದೂ, ಮಲ್ಲಿಗೆ ದುಂಡಗಿದೆಯೆಂದೂ, ಜಾಲಾರಿ ಡೊಂಕು ಡೊಂಕಾಗಿ ಬಳ್ಳಿವರಿದಿದೆಯೆಂದೂ, ಕೇದಗೆಯಂತೆ ಕಮಲವಿಲ್ಲವೆಂದೂ ಆಡಿಕೊಂಡು ಯೋಗ್ಯತ್ಯಾಜ್ಯಗಳನ್ನು ನಿರ್ಣಯಿಸುವುದು ರುಚಿಪ್ರಾಗಲ್ಭ್ಯವನ್ನು ತೋರದು. ಕಾವ್ಯದಲ್ಲೂ ಹಾಗೆಯೇ. ಮೊದಲು ಭವದನು ಭವ, ನಡುವೆ ಬಿಡುಗಡೆ, ಮತ್ತೆ ಪುನರ್ಭವ; ಈ ಭವಪುನರ್ಭವಗಳ ನಡುವೆ ಈ ಬಿಡುಗಡೆ ತನ್ನ ಪ್ರಶಾಂತ ತೇಜಸ್ಸನ್ನು ಮೆರೆಸುತ್ತಿದ್ದರೆ, ಅದು ಕಾವ್ಯ. ನೀರೋಟದಿಂದ ವಜ್ರಕ್ಕೆ ಬೆಲೆ. " ಯುವತಿ ವಿಲಾಪಂ ಶೃಣುತ ಸುಧಾಮಧುರಂ, ವಿಬುಧಾಲಯತೋಪಿ ದುರಾಪಂ " ಎನ್ನುತ್ತದೆ ಆ ಕಾವ್ಯ. ಕವಿಗೂ " ಭಣಿತಂ, ಕಲಿಕಲುಷಂ ಜನಯತು ಪರಿಶಮಿತಂ " ಎಂಬುದೇ ಒಳಮೊರೆ.

ಈ ತೆರದ ಆಲೋಚನೆಗಳು ನನ್ನ ಕಾವ್ಯಾಭ್ಯಾಸದ ಮತ್ತು ಕಾವ್ಯ ಕರ್ಮದ ಪ್ರಜ್ಞಾಮೂಲದಲ್ಲಿರುವಂತೆ ತೋರುತ್ತದೆ. "ಸುನಾಯಿ" "ಬಿಡುವು" "ಜಗಜೆಲುವೆನ್ನುವಬಗೆಯನುರಣನೆ" "ರಸ ಸರಸ್ವತಿ" ಇತ್ಯಾದಿ ಕವನಗಳಲ್ಲಿ ಈ ಜಿಜ್ಞಾಸೆಯ ಹೊಳಲಿವೆ. ಈ ಕಾವ್ಯ ಮೀಮಾಂಸೆಯೇ ತಪ್ಪಾಗಿರಬಹುದು; ನನ್ನ ಕೃತಿಗಳಲ್ಲಿ ಈ ಗುಣಗಳಿಲ್ಲದಿರ ಬಹುದು. ಇದು ಹೇಗಾದರೂ ಇರಲಿ, ನಾನು ನನ್ನ ಜನಕ್ಕೆ ಶುದ್ಧ ಹೃದಯ ದಿಂದ ಕೊಡತಕ್ಕ ವಸ್ತು ಇವುಗಳೊಂದೇ ಆದ್ದರಿಂದ ಈ ಕೊಡುಗೆಯಿಂದ ಯಾರಿಗೂ ಕ್ಲೇಶವಾಗದಿರಲೆಂದೂ, ಈ ಸಂಗ್ರಹದ ಪ್ರಕಟನೆಯಿಂದ ಸಹೃದಯರ ಉಲ್ಲಾಸ ಹೆಚ್ಚಲೆಂದೂ, ಮತ್ತು ಪ್ರಕಾಶಕರ ಉತ್ಸಾಹ ಕುಂದದಿರಲೆಂದೂ ಹಾರೈಸಲು ಮಾತ್ರ ಬಲ್ಲೆ.

ಇತಿ ಶಂ,

**ಪು. ತಿ. ನ.**

# ಸಂಪಾದಕರ ನುಡಿ

ಕನ್ನಡ ನಾಡಿನ ಸುಪ್ರಸಿದ್ಧ ಕವಿಗಳಾದ ಶ್ರೀ ಪು. ತಿ. ನರಸಿಂಹಾಚಾರ್ಯರು ತಮ್ಮ ಈ ಕವನ ಸಂಗ್ರಹವನ್ನು ನನ್ನ ಗ್ರಂಥಮಾಲೆಯಲ್ಲಿ ಪ್ರಕಟಿಸಲು ಅನುಮತಿಯಿತ್ತು ನನ್ನನ್ನು ಹರಸಿದ್ದಾರೆ; ನನ್ನ ಗ್ರಂಥಮಾಲೆಯ ಕಾವ್ಯಸಂಪತ್ತನ್ನು ಬೆಳೆಸಿದ್ದಾರೆ. ಈ ಒಂದು ಅವ್ಯಾಜ ಕೃಪೆಗಾಗಿ ಕವಿವರ್ಯ ಶ್ರೀ ಪು. ತಿ. ನರಸಿಂಹಾಚಾರ್ಯರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

'ಒಲುಮೆ' ಪ್ರಕಟವಾದ ಅಲ್ಪಾವಕಾಶದಲ್ಲಿಯೇ 'ರಸ ಸರಸ್ವತಿ' ಈ ನನ್ನ ಗ್ರಂಥಮಾಲೆಯಲ್ಲಿ ಹೊರಬೀಳಬಹುದೆಂದು ನಾನು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಹೀಗಿರುವಾಗ ತಾವಾಗಿಯೇ ಮುಂದೆ ಬಂದು ನನ್ನನ್ನು ಹುರಿದುಂಬಿಸಿ ಇದನ್ನು ಪ್ರಕಟಿಸಬೇಕೆಂದು ಪ್ರೋತ್ಸಾಹಿಸಿದವರು ನನ್ನ ತರುಣಮಿತ್ರರಾದ ಶ್ರೀಯುತ ಕೆ. ವಿ. ಸುಬ್ಬಣ್ಣನವರು ಮತ್ತು ಹ. ಮಾ. ನಾಯಕರು. ಈ ಗ್ರಂಥದ ಪ್ರಕಟನೆಯ ಭಾಗ್ಯವನ್ನು ದೊರಕಿಸಿಕೊಟ್ಟ ಭಾಗ್ಯ ಸಂಪೂರ್ಣವಾಗಿ ಅವರಿಗೇ ಸಲ್ಲುತ್ತದೆ. ಪ್ರಿಯಮಿತ್ರರಾದ ಶ್ರೀ ಜಿ. ಎಚ್. ರಾಮರಾಯರು ನನ್ನಲ್ಲಿರುವ ತುಂಬುವಿಶ್ವಾಸದಿಂದ ಎಂದಿನಂತೆ ಕುಂದದ ಶ್ರದ್ಧೆಯಿಂದ ಈ ಗ್ರಂಥವನ್ನು ಸರ್ವಾಂಗ ಸುಂದರವಾಗಿ ಮುದ್ರಿಸಿದ್ದಾರೆ. ಈ ನನ್ನ ಹಿತೈಷಿಗಳೆಲ್ಲರಿಗೂ ಅನಂತವಂದನೆಗಳು.

ಶಾರದಾ ಮಂದಿರ
ಕೃಷ್ಣರಾಜವನಂ, ಮೈಸೂರು
೪–೩–೧೯೫೪

**ಎಚ್.ಎಂ. ಶಂಕರನಾರಾಯಣರಾವ್**
ಸಂಪಾದಕ ಮತ್ತು ಪ್ರಕಾಶಕ

# ಕವನಗಳ ಕ್ರಮ


| | | |
|---|---|---|
| ೧. | ದೀಪಾವಳಿ | ೩ |
| ೨. | ನಾಡಿನಳ್ಕರೆ | ೫ |
| ೩. | ಗಾಂಧೀಸ್ತವ | ೧೧ |
| ೪. | ಸ್ವಾತಂತ್ರ್ಯದೇವಿಗೆ | ೧೪ |
| ೫. | ಜಯ ನವಭಾರತಕೆ | ೧೭ |
| ೬. | ಈ ತಿಂಗಳು ಜನವರೀ | ೨೦ |
| ೭. | ಕೊಳದ ಹೇಳಿಕೆ | ೨೨ |
| ೮. | ಇರವು ಮತ್ತು ಧರ್ಮಗಳ ಹಾಡು | ೨೩ |
| ೯. | ಗಾಳಿಗಳ ಹಾಡು | ೨೬ |
| ೧೦. | ಡಾಳಿಂಬೆ | ೨೯ |
| ೧೧. | ಇರುಳು—ನಿದ್ದೆ | ೩೦ |
| ೧೨. | ಬಿಡುವು | ೩೧ |
| ೧೩. | ಬಿಸಮಿಲ್ಲರ ಸುನಾಯಿಯನ್ನು ಕೇಳಿ | ೩೨ |
| ೧೪. | ಗೊಮ್ಮಟಜಿನನನ್ನೂ ಶ್ರವಣಬೆಳುಗೊಳವನ್ನೂ ಕುರಿತು | ೩೩ |
| ೧೫. | ಪ್ರಥಮೈಕಾದಶೀ | ೩೪ |
| ೧೬. | ಪುಣ್ಯಕ್ಷೇತ್ರಗಳಲ್ಲಿ ಬರುವ ಕಾವುಜೀವಕಾಮುವನ್ನು ಕುರಿತು | ೩೫ |
| ೧೭. | ಮಳೆ | ೩೬ |
| ೧೮. | ಜಗಚೆಲುವೆನ್ನುವ ಬಗೆಯನುರಣನೆ | ೩೭ |
| ೧೯. | ವಿದ್ಯಾಲಯ | ೩೯ |
| ೨೦. | ರಸ ಸರಸ್ವತಿ | ೪೪ |
| ೨೧. | ವಸಂತ ಚಂದನ | ೫೦ |
| ೨೨. | ದಶಾವತಾರ | ೫೩ |
| ೨೩. | ‘ನರಸಿಂಗ’ ನಿಗೆ ಮರುಳಾದ ಮಗಳು | ೫೭ |
| ೨೪. | ಚೆಲುವ ನಾರಾಯಣ | ೬೦ |

## ಕೆಲವು ಅಚ್ಚಿನ ತಪ್ಪುಗಳು

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| ೭ | ಶೀರ್ಷಿಕೆ | ನೀರ್ವೆದ | ನಿರ್ವೇದ |
| ೯ | ೧೧ | ವೀಧಿವೀಕ್ಷಣ | ವೀಥಿವೀಕ್ಷಣ |
| ೨೩ | ಶೀರ್ಷಿಕೆ | ಇರುವು | ಇರವು |
| ೩೬ | ೧೪ | ಅವಭೃತ | ಅವಭೃಥ |
| ೪೭ | ೭ | ಕಮ್ಮಿದಲಂತಿರವು | ಕಮ್ಮಿದಲರಂತಿರವು |

# ರಸ ಸರಸ್ವತಿ
# ಮತ್ತು
# ಇತರ ಕವನಗಳು

# ದೀಪಾವಳಿ

ಬಂದಿತು ದೀಪಾವಳಿ ಮನೆಮನೆಯೊಳು
ಕುಡಿಯಾಡಿಸುತಿವೆ ನರುಬೆಳಕು
ಮಿರುಪೊಡರಿನ ಮಿತಮಾನಮೊಳಿರುಳನು
ಮೊಗೆದು ಸುರಿವ ಮೋದದ ತಳಕು.
ಕತ್ತಲೊಡನೆ ಪಂತವಿಲ್ಲವಿವಕೆ
ತಮದೊಡನಜ್ಜಿಯಾಟವಾಡುವಂಥ ಬಯಕೆ
ಇವ ಹಚ್ಚುತಿರುವ ಮಕ್ಕಳಂತೆ ಮುದ್ದು
ಈ ನೋಟವೆನ್ನ ಮನದ ಜಡಕೆ ಮದ್ದು.

ಧಗ ಧಗ ನುರಿಮುರವಣಿಸುತ ಬಂದಾ
ಹರಿಚಕ್ರವನಸುವಿಂ ಶಮಿಸಿ
ಆ ಬೆಂಕಿಯ ಲಯರೂಕ್ಷತೆಗೀ ತೆರ
ಸುಂದರ ಸೌಮ್ಯತೆಯಳವಡಿಸಿ
ಭವಗರದಾಗರ ತಾನೆನೆ ಬಾಳುತ
ಕೊನೆಗೀ ಹಬ್ಬದ ಸೊವೆಯಿತ್ತ
ನರಕನ ನೆನವುದು ಮನ ನಲಿದೀ ದಿನ
ಬೆಳಕಿನ ತೆನೆಗಳ ಬೆಳೆಸುತ್ತ.

ಮದಿಸಿದ ಬಲಿಯನು ತುಳಿದವನವನಾಳಾವವನವನು
ಅಣುಹೃದಯದಿ ಪವಡಿಸುತೀ ಸೃಷ್ಟಿಯ ಕನಸಾಂತವನು
ತಾನೆಚ್ಚರೆ ಜಗವೆಲ್ಲವ ಬರಿತೇಜದಿ ತುಂಬುವನು
ಆ ಎಡೆವಿಲಯಾಗ್ನಿಗು ಈ ಎಡೆ ಹಣತೆಗು ಇಂಬವನು.

ಈ ತೆರನಾದಾ ವಿಶ್ವ ವಿಚಿತ್ರನ ನೆಸೆವೆ
ಆ ತೇಜದ ಕಾರುಣ್ಯದ ರೂಪದ ಈ ದೀಪಾವಳಿಯೊಳು ನಲಿವೆ
ವಿಜ್ಞಾನದ ಮದವಾಂತಾಸುರಮೊಳು ವಿಲಯಾಗ್ನಿಯ
ಮೆರೆಸುವ ಲೋಕವ ಮರೆವೆ
ಇರುಳೊಡನೀತೆರ ಬಹುವರ್ಣದ ಲಾಲಿತ್ಯಮೊಳಾಡುವ
ಬೆಳಕಿಗೆ ಜಯವೆರೆವೆ.

# ನಾಡಿನಕ್ಕರೆ

ಬಾನು ತೆರೆದಿರೆ ತಿರೆಯ ತೊಯ್ದಿರೆ ಸೂರ್ಯ ತನ್ನನುರಾಗದಿ
ದೃಷ್ಟಿಯೊಂದಿರೆ ರಸೆಗೆ ಪಸುಳೆಯ ಸ್ತನ್ಯಪಾನದ ಭಾವದಿ
ಕನಸುಮುಂದಿರೆ ನಾಡಿನಕ್ಕರೆ ಹೃದಯದೊಳು ಮಡುವಾಗಿರೆ
ನಮ್ಮನಾಡನು ಕುರಿತು ನಾನಿಂದಾವ ತೆರದೊಳು ಹಾಡಲಿ ?

ನಲಿವ ತೋಟಿನ ನಗುವ ಕೆಸೆಗಳ ಹುಲುಸು ಪೈರಿನ ಹೊಲಗಳ
ದೂರ ಕುಲಪಿತರಂತೆ ರಕ್ಷೆಗೆ ಕುಳಿತ ಸಾಲಿನ ಮಲೆಗಳ
ಜೀವದಾನದ ಅಂಬುವಾಹದ ಬಯಲ ಮಡಲಿನ ಹಳ್ಳಿಯ
ನಮ್ಮ ನೆಲದೀ ಚೆಲುವ ಕುರಿತಿಂದಾವ ತೆರದೊಳು ಹಾಡಲಿ ?

ದಿನದ ದೇವನ ತೇರನೆಳೆಯುವ ಕುದುರೆಯೇಳರ ಕೆನೆತಕೆ
ಹೊನಲುಗೊಡುವಿಂಚರದ ಕಣಿವೆಯ, ಮಳೆಯ ಗಾಳಿಯ ಮೊರೆತಕೆ
ಹುರುಪುಗೊಡುತಿಹ ಹೂತ ಹಿಪ್ಪೆಯ ಕಂಪಿನುಸಿರಿನ ಹಳುವಿನ
ಹೊಲದ ತಾಯಿಯ ಮೊಲೆಯ ತೆರದೊಳು ಕಣದ ಬಣಜಿಗಳೊಟ್ಟಿನ

ತಳಿರಿನವಕುಂಠನದಿ ಮಾಧವವಧುವಿನಂದದ ಮಾವಿನ
ತರಳಪರ್ಣಾಶ್ವತ್ಥವೃಕ್ಷಕೆ ಮಧುರಳಾಗಿಹ ಜೀವಿನ
ಸ್ವಾವಲಂಬನದಿಂದ ಹಳುವನೆ ತುಂಬುತ್ತಿಲು ಬೆಳೆವಾಲದ
ತಂಪುನೆಳಲೊಳು ಬಿಡುವಗೊಳ್ಳಲು ಗೊಲ್ಲನೊಲಿವ ತಮಾಲದ

ಕೋಡತುದಿಯೊಳು ಕಾಡನಡುಗಡೆ ಆತ್ಮದನುಭವಸಾರವ
ತುಂಬಿಯಂದದಿ ಮರ್ತ್ಯ ಕೂಡಿಡೆ ಬಯಸಿ ಭದ್ರಾಗಾರವ
ನಿರ್ಮಿಸಿಹ ನೀತೆರದೊಳೆನುವಂತಿರುವ ಗುಡಿಗೋಪುರಗಳ
ಬದುಕಿಗೂರಿದ ಸೊಬಗೆ ಹರಳಾದಂತೆ ಮೆರೆಯುವ ಪುರಗಳ—

ಮೊಲ್ಲೆ ಮಲ್ಲಿಗೆ ಜಾಜಿ ಸಂಪಗೆ ಸುರಗಿ ಪಾದರಿ ಕೇದಗೆ
ಹಲವು ಹೋಲಿಕೆಗಾದ ಪಂಕಜ ಇರವಂತಿ ಸೇವಂತಿಗೆ
ಪಾರಿಜಾತ ಸುಗಂಧರಾಜ ಕದಂಬ ಜಾಲಿಯ ಸೌಸವ
ಆವ ಮಣ್ಣೀತೆರದ ಕಂಪ್ರೊಳು ಪ್ರಕಟಿಪುದು ತನ್ನಾತ್ಮವ ?

ತಿಣ್ಣ ಮಲೆಗಾಳಿಯನು ಹೊಗಳಲಿ ತಪ್ಪಲಿನ ಕಮ್ಮೆಲರನು
ಕೆರೆಯ ಚೆಂದಾವರೆಯ ಹೂಗಳ ಹಾಯ್ದು ಬಹ ತಣ್ಣೆಲರನು
ಮಳೆಯ ಮೋಡದಿ ತೂರಿ ಮಿಂಚನು ಕುಣಿಸಿ ಗುಡುಗನು ದನಿಸುತ
ಜವ್ವನಿಗರೆದೆ ಬೆದರೆ ಬರುವಾ ಮುಂಗಾರ ಬೆದೆಗಾಳಿಯ ?

ಮಾಂದಳಿರ ಕೈಯಾಡೆ ಕೋಗಿಲೆ ಕೂಗೆ ದುಂಬಿಯು ಮೊರೆಯಿಡೆ
ಪಚ್ಚೆಗಿಳಿಗಳ ತೊಡವ ತೋರುತ ಗೋಣಿಮರಗಳು ಸಾಲಿಡೆ
ಹಚ್ಚ ಹಸುರಿನ ನಡುವೆ ಬೆಳ್ಳನೆ ದಾರಿ ಪಯಣಕೆ ಹೊರಟಿರೆ
ನನ್ನ ಚಿತ್ತವ ದಾರಿಗನ ಗೈದೆಲ್ಲಿಗೈದಿಸಲೀ ದಿನ ?

ನೆಲಮುಗಿಲ ಕನಸುಗಳ ಕೊಳ್ಳುತ ದನಿಯ ದೋಣಿಯೊಳಾಡಿಸಿ
ಎಲರ ಮಲರಿಸುವಂಥ ಹಕ್ಕಿಗಳಿಂಚರವ ನಾನಾಲಿಸಿ
ಭಾವ ಶೃಂಗಾರದೊಳು ಛಂದೋಗತಿಗೆ ನರ್ತಿಸಲೆಳಸುವೀ
ನುಡಿಯ ಲಾಸ್ಯಕೆ ರಂಗವಾವುದ ಸಜ್ಜುಗೊಳಿಸುವೆನೇಪರಿ ?

## ಪೂರ್ವಮುಹಿಮಾದರ್ಶನ

**ಇರುಳ ದುಗುಲವ ಕಳೆದು ಹೊನ್ನುಡೆಯುಟ್ಟು ತೇಜವ ಚಿಮುಕಿಸಿ**
**ಮೂಡಣದ ಮಲೆಯೇರಿ ಬಾನಿಗೆ ಹಾರಿ ನಿದ್ದೆಯ ಹಾರಿಸಿ**
**ಕಲಕೆ ಖಗರವದರ್ಘ್ಯ ಮೌನವ ಮಲರ್‌ಗಂಗಳ ಬನಬಿಡೆ**
**ಮೂಡಿ ಬಾ, ಮುಂಬೆಳಗಿನರಸಿ, ಮುನತುಳಿದು, ನುಡಿತಳಿರಿಂದೆ**

ಹಿಂದೆ ನೋಡಲು ವೇದಪರ್ವತ ಮಂತ್ರಶಿಖರವ ಮೆರೆಸುತ
ದಿಕ್ ದಿಗಂತದಿ ದಿವವನೆತ್ತಿದೆ ದೇವದೇವರ ಹೊಳೆಸುತ
ಆದರುಪಾಂತ್ಯದಿ ಮಹಾಮಹಿಮರ ಚರಿತೆಬನ ಸೊಂಪಾಗಿದೆ
ಪರಮ ಋಷಿಗಳ ಸೂಕ್ತಿವಾಹಿನಿ ಯದಕೆ ಜೀವನವೆರೆದಿದೆ.

ಎನಿತು ತವಸಿಗಳಾತ್ಮರಸದೊಳು ಮಿಂದು ಪಾವನವೀ ರಸೆ
ಎನಿತು ಕವಿಗಳ ಭಕ್ತಿಯುಕ್ತಿಗಳಿದಕೆ ಉತ್ಸವ ಮಾಡಿಸೆ
ಎನಿತು ಬಾಳ್ಕಡೆದೆನಿತು ವಿಷಕುಡಿದೆನಿತು ಸೊಗಸೊವೆಗರೆಯುತ
ಎನಿತು ಚೇತನವಿದರ ರುಚಿಗೊಂಡೆಂಥ ಭಾವಕೆ ಸಂದಿದೆ !

ಭರತವರ್ಷವೆ, ನಿನ್ನ ತೇಜದ ಮುಂಬೆಳಗ ಶ್ರುತಿ ತೋರ್ದ್ದುವು
ಧರ್ಮದವತಾರಂಗಳೇರನು, ಪರಾಕ್ರಮಣವು ಮುಳುಗನು
ಎಂಬ ಸತ್ಯಾಭಾಸ ನಮಗಹುದದರ ಸಿರಿಸೊಗ ದುಕ್ಕವು
ನಿನಗಿಲ್ಲ—ಮೂಡೇರುಬೈಗಿನ ಮೋಹ ನೇಸರಿಗಿಲ್ಲವು.

ಹಿಂದೆ ಆಯಿತು ಇಂದು ಹೋಯಿತು ಮುಂದೆಯೆಂದಿಗು ಆಗದು
ಎಂದು ಹಲುಬುವರರಿವರೇನೌ ನಿನ್ನ ಸತ್ವದ ಮಹಿಮೆಯ ?
ವಿಶ್ವದಾತ್ಮವನೆತ್ತಿ ಹಿಡಿದಿಹೆ ಆದಿಶೇಷನ ಧೃತಿಯೊಳು
ಕಾಲಕಾಲಕು ಮತಮತದ ಪ್ರೊರೆಯುರ್ಚಿ ಹುರುಪಹ ಮತಿಯೊಳು.

## ಇತಿಹಾಸಾವಲೋಕನ ನಿರ್ವೇದ

ಪರಶಿವಗು ತಪದಿಚ್ಛೆಯೊಮ್ಮೆಗೆ ಹರಿಗು ಯೋಗದ ನಿದ್ರೆಯು
ಭಾರತಾತ್ಮವೆ, ನಿನಗು ಅಂತರ್ಮುಖತೆಯಾಯಿತೆ ಸಹಜದಿ ?
ನೀನು ಸಾಸಿರವರುಷ ಜಡರೊಳೆಯಿದ್ದೆ ಹರಣವ ಪದುಗಿಸಿ
ತವರ ಸೇರಿದ ಮೇಲೆ ಜಾನಕಿ ರಾಮರಾಜ್ಯವಿದೋ ಎನೆ.

ಕೃಷಿಯುಪೇಕ್ಷಿತವಾಗಿ ಹುಲುಸದ ನೆಲಕೆ ಚಿಚ್ಚರಮೊಕ್ಕಲು
ಗೊಬ್ಬರವನಿಕ್ಕಪ್ರೊಲು ತಂದನು ಪರಜನವ ಪಶುಪತಿಯೆನೆ
ಶಕರು ಹೂಣರು ತುರುಕರಾಫ್ಘನರಂತೆ ಮುಘಲರು ತಮ್ಮಯ
ತನುಮನವ ಬೆರಸಿದರು ನಿನ್ನಯ ಮಣ್ಣೊಳು ರಸವೂರಲು.

ಬೇಸಾಯ ಬೆಳೆಯಪ್ಪ ಕಾಲಕೆ ಕಳೆಗಳೇಳ್ವವು ಹುಳುಗಳೂ
ಹಾಲು ತೆನೆಗೂಡುತಿರೆ ಪೈರೊಳು ಬೆಳ್ಳಕ್ಕಿ ಸಾಲಿಡುವುವು
ಇಂತೆ ಆಯಿತೊ ಏನೊ ನಮ್ಮೀನಾಡಿನೈಸಿರಿ ಸುಗ್ಗಿಗೆ
ಈ ನೆಲದಿ ಹುಳು ಹುಪಟೆ ಹೆಚ್ಚಿತು, ಬಿಳಿಯ ಜನ ಕಾಲೂರಿತು.

ಮೇದಿನಿಯ ಬಲದಿಂದಲೊಯ್ಯುವ ಹಿರಣ್ಯಾಕ್ಷನೊ ಎಂಬೊಲು
ಅಸುರವ ಮೆರೆಸುತ್ತ ಸೆಳೆದರು ಭಾರತಾತ್ಮವನಾಂಗ್ಲರು
ವಿಜ್ಞಾನ ಪಾಶಗಳ ಬೀಸುತ ಬಂಧಿಸುತ ಕೊಂಡೊಯ್ದರು
ಸಪ್ತಸಾಗರದಾಚೆ ತಮ್ಮಯ ನಾಡ ಮಂಚಕೆ ಬಿಗಿದರು.

ಎಲೆ, ಹರಿಪ್ರಿಯೆ, ನಿನ್ನ ತನುಜರ ಭಂಗಕಾವನು ಮರುಗನು
ನಿನ್ನ ಋಷಿಕವಿದೇವಗಮನವ ಸೆಳೆವೆಯಾ ನಿಟ್ಟುಸಿರೊಳು ?
ಮುಕ್ತರವರನುತಪಿಸಿ ಬಿದ್ದರೆ ಪುನರ್ಜನ್ಮವ ಬವಣೆಗೆ
ನಿನ್ನ ಮಣ್ಣೊಳೆ ತನುವನಾನುತ ನಿನ್ನ ವಿಭವವ ಮರಳಿಸೆ ?

## ಮುಂಜಾನೆಯ ಮುನ್ನಿರುಳು

ದೇವನಿಲ್ಲಿಗೆ ಬರುವ ಮುನ್ನವೆ ದೇವದೂತರು ಬರುವರು
ಎನ್ನುವೈತಿಹ್ಯವನು ನಿಜವೆನಿಸೆನಿತುದಾತ್ತಧ್ಯೇಯರು
ಬಾನವರಿಂಗಿಳೆ ಸುಪಥವಾಗಲು ಮುನ್ನ ಜನ್ಮವ ಪಡೆಯುತ
ನಡೆದರೈ ಪರದರ್ಪದುರ್ಗಮವಾದ ನಮ್ಮೀ ನಾಡೊಳು.

## ನಾಡಿನಕ್ಕರೆ

ರಾಮಮೋಹನ ರಾಮಕೃಷ್ಣರು ಯತಿ ವಿವೇಕಾನಂದರು
ಮೆಹತ ಬಂಕಿಮಚಂದ್ರ ಗೋಖಲೆ ದಾಸ ಶ್ರದ್ಧಾನಂದಜಿ
ಅನ್ಸಾರಿ ನವರೋಜಿ ಇಕ್ಬಲ ಮಾಲವೀಯರು ರಾನಡೆ
ಲಾಲಲಜಪತರಾಯ ಮೋತಿಲಾಲ ತಿಲಕ ರವೀಂದ್ರರು—

ಇಂತೆಣಿಸಿ ಮುಗಿಸುವೆನೆ ನಾನೀ ದಿವ್ಯತೇಜೋಮಹಿಮರ
ಭಾರತಮೊಳಿಂಗ್ಲೆಂಡು ಚೆಲ್ಲಿದ ನೆರಳತಮದೊಳು ಹೊಳೆದರ
ಭೀತಿಮೋಹವಿಮಾನಮೂರ್ಛಿತ ರಾಗಮುಳಿಸರ ಧೀರರ
ಇರುಳ ಗರ್ವದ ಮೌನವಿಗಡಿಸೆ ಉಷಾಸ್ಫೂರ್ಜನ್ನಾದರ ?

ನೆಲವ ತಬ್ಬಿರುವಂಧಕಾರವ ದೂರದುಡುಗಣ ಹರಿಸದು
ನೆಲವ ತಬ್ಬುವ ಬೆಳಕೆ ಬೇಕಿದನೆಬ್ಬಿಸುತಲಸುವೆಸೆಯಲು
ಬುದ್ಧಿಯುಪ್ಪರಿಗೆಯಲಿ ನಿಲಿಸಿದ ವೀಥಿವೀಕ್ಷಣ ಚತುರರು
ತಲದಿ ನಡೆಯುವ ಪ್ರಾಣದಾಟಕೆ ಮೋಹಗೊಂಡರು ವಿಫಲರು.

ಅನ್ನಕೋಶದಿ ಬಂದಿ ಹಲವೆಡೆ ಪ್ರಾಣಕೋಶದಿ ಹಲವೆಡೆ
ಮನೋಜ್ಞಾನಾನಂದ ಕೋಶಗಳಲ್ಲಿಯುಂತೆಯೆ ಕೆಲವೆಡೆ
ಭಾರತದ ಚೈತನ್ಯವಾಹಿನಿ ಸೇತು ಬಂಧಿತೆಯಾಗುತ
ಪರರ ಸಂಪತ್ ಸುರ್ಘನೆಗಾವಳು ತನ್ನ ತಾನೇ ಮರೆಯುತ.

ಪಂಚಕೋಶಗಳಲ್ಲು ಎಡೆತಡೆಯಿಲ್ಲದಂದದಿ ಹರಿಯುತ
ಈ ಮಹಾನದಿ ವಿಶ್ವಜೀವನಶಿವಧಿಸಂಗಮೆಯಪ್ಪಳೆ ?
ಪ್ರಕೃತಿತಾರಕೆಯಾಗದಂದದಿ ಕುಟಿಲ ರೌದ್ರವ ಮೆರೆಸುತ
ರುದ್ರಜಟೆಯೊಳು ಸಿಲುಕದೀ ಹರಿಪವೆಗೆ ಬಿಡುಗಡೆಯೆಂದಿಗೆ ?

## ಉದಯ—ಗಾಂಧೀ ಜನನ

ಎನ್ನುತೀ ನೆಲದುನ್ನತಾತ್ಮರು ಹಂಬಲಿಸಿ ತಪವಿರುತಿರೆ
ಕೃಷ್ಣನಿರ‍್ಯಾಣವನು ಕಂಡಾ ನಾಡ ಸಾಗರತೀರದಿ
ಪೋರಬಂದರವೆಂಬ ಪುರದೊಳು ಸಂತನಿ ಠಕ್ಕೈತಂದನು
ವಣಿಜ ಸ್ವದಂಶದೊಳು ವಣಿಜರ ಬಾಧೆ ತಪ್ಪಿಸೆ ದೇಶಕೆ.

# ಗಾಂಧೀಸ್ತವ

೧

ನೆನೆವೆನೀ ದಿನ ಪುಣ್ಯಜಾತನ ನಮ್ಮ ನಾಡವಿಧಾತನ
ಜನಪದ ಸ್ವಾತಂತ್ರ್ಯದಾತನ ಸಕಲಹೃದಯೋಪೇತನ
ನೆನೆಯುತಚ್ಚರಿಗೊಳುವೆ ಮಹಿಮನ ದಿವ್ಯಮಂಗಳ ಚರಿತೆಗೆ
ಕೊನೆಯ ಕೇಡಿಗೆ ದುಗುಡಗೊಳುವೆನು ರಿಕ್ತವಾದೀ ಜನತೆಗೆ.

೨

ನಡಸುವೊಲೆ ನಡೆವಂಥ ಕುರಿಗಳೆ ನೀವು, ಭಾರತಪುತ್ರರೆ ?
ಪಡೆದುದನು ಪಡುವಂಥ ದುರ್ಬಲ ದೈವವೇಯ ನಿರೀಹರೇ ?
ನಡೆಯಿರೀ ಬಳಿ, ನೋಡಿಕೊಳ್ಳಿರಿ ಪಡಿನೆಳಲ ನನ್ನಿರವೊಳು
ಬಿಡಿರಿ ದೈನ್ಯವನೆಂದು ಸಾರಿದ ಈತನಲ್ಲವೆ ತೀರ್ಥನು !

೩

ಎನಿತು ತಾರೆಗಳಿರಲಿ ಇರುಳೀ ಚಂದ್ರನಿಂ ಜ್ಯೋತಿಷ್ಮತಿ
ಅನಿತೆ ತಮವಿಡಿದೆಮ್ಮ ನೆಲವೀ ಗಾಂಧಿಯಿಂ ಜ್ಯೋತಿಷ್ಮತಿ
ಮನಕೆ ನಿಲುಕದ ದಿವ್ಯದೀಪ್ತಿಯ ಕೊಂಡು ಮೈಯೊಳು ಪಳಗಿಸಿ
ತನಿವೆಳಗ ನಮ್ಮೆಡೆಗೆ ಚೆಲ್ಲಿದ ಸೌಮ್ಯನಿವನೆಮಗಿನಿಯನೈ.

೪

ತನ್ನ ನಿಜದೊಳು ತಾನು ನಡೆಯಲು ಲೋಕ ತನ್ನಂತಪ್ಪುದು
ಉನ್ನತಿಯ ಬಯಸುವೊಡೆ ವಿಷಯದ ನಂಟು ಸಾಧಕಗೊಪ್ಪದು
ಬನ್ನಗಳ ಬೆಲೆಯಿಂದಲಾತ್ಮದ ಸಂಪದವ ವಿಧಿಯಳೆವನು
ಎನ್ನುವೀ ಸಾಮಾನ್ಯನೀತಿಯಿನಾದನಿವನಸಮಾನನು.

೫

ತಾಳ್ಮೆಯಿಂ ಕ್ರೌರ್ಯವನು ಶಾಂತಿಯಿಂ ಕೋಪವನು
ಸತ್ಯದಿಂದನೃತವನು ಗೆಲ್ಲೆ ಬಯಸಿ
ಜಾಲ್ಮತೆಗೆ ಜಾಲ್ಮತೆಯನೊಡ್ಡಿ ಸೆಣಸುವ ರೂಢ
ರಾಜನೀತಿಯನೊಡೆದನೀ ಸಾಹಸಿ
ನಲ್ಮೆಗುರಿಯನು ಮುಟ್ಟೆ ಸ್ರೊಲ್ಲಮೆಯ ಬಳಿ ಸಲ್ಲ
ಭಾವವಂದದಿ ಬದುಕು, ಜೇನೆಯಲ್ಲ
ಮೇಲ್ಮೆಯನು ಸಾಧಿಸ್ರೊಡೆ ನೇರವಿರಲೆಮ್ಮ ನಡೆ
ಎಂಬಿವನ ಶಿವಛಲವನಾವ ಬಲ್ಲ ?

೬

ಕೇಡಿಗೆ ಕೇಡೆಣಿಸುವ ಬಗೆ ದೇವಗು ತಪ್ಪದೆನೆ
ಹಾಡುವೆವೆಂಟವತಾರದ ಗೋವಿಂದನ ಛವವ
ಈಡಾಗದೆ ಈತೆರ ಖಲಶಾಪಕೆ ಮಾತವಸಿ
ನೀಡಿದನಭಯವ ಲೋಕಕೆ–ಈತನಿಗಾವನೆಣೆ ?

೭

ಹೊಗಳಲೆ ಹರಿಜನಶಾಪವಿಮೋಚನ ಕಾರ್ಯವ
ಹೊಗಳಲೆ ನಾಡಿನ ನೈಚ್ಯವನಳಿಸಿದ ಕಾರ್ಯವ
ಹೊಗಳಲೆ ನರಪಶು ಮಾನವನೆನಿಸಿದ ಕಾರ್ಯವ ?
ಹೊಗಳಿಕೆಗೂ ಮಿಗಿಲೀತನ ಕಲ್ಯಾಣಕೃತಿ.

೮

ಹದಗೆಡುವ್ರೊಲು ನರಲೋಕಮೊಳಾಸುರಶಕ್ತಿಯ ತುಂಬಿ
ಅದತೂಗಲು ದುರ್ಬಲಶಿವಸದ್ಬಲನೊಬ್ಬನ ತಂದು
ಒದಗುತ್ತಿರಲೀ ತೂಕಕೆ ಶಿವಾಶಿವದ ಸಮಭಾರ
ವಿಧಿಯೀತನನೊಯ್ದನಲಾ ಏನೀ ವಿಷಮವಿಲಾಸ !

೯

ತಕ್ಕುದೆ ಉಳಿಯುವುದೆನ್ನುವ ನಿಯಮವ
ಪಾಶವಲೋಕದೊಳನ್ವಯಿಸಿ
ತಕ್ಕವನೆನಿಸದ ಮಾನವಶಿಶುವನು
ಜೀವಶಕ್ತಿ ಹೊರತಂದಂತೆ
ಉಕ್ಕಿನ ಯುಗದೊಳು ಯಾಂತ್ರಿಕ ಬಲವ-
ದ್ಧರ್ಮವ ಹಿಂಚಿಸಿ ಮುಂಬರಿಯೆ
ಸೊಕ್ಕಿದವರು ಬಲುನಕ್ಕು ಜರೆಯುವೀ
ಗಾಂಧೀಧರ್ಮವ ತಂದಿಹುವೋ ?

೧೦

ಮಹಾತ್ಮನುದಿಸುವ ಮುನ್ನೀನಾಡಿನ ಬಾಳ್ವಿಯ ತೆರ ಬೇರೆ
ಇಹಯಾತ್ರೆಯನಿವ ಮುಗಿಸುತ ಮರಳಲು ಇದರೀತೆರ ಬೇರೆ
ಮಹಾನುಭಾವನ ಸಮೃದ್ಧರುಚಿಯೀ ಜೀವನರಸ ಬೆರೆತು
ಮಹಾಂತವಹುದೀ ಭಾರತಜೀವನ ಸೌಹೃದರಸರುಚಿರ.

೧೧

ಈತೆರವೀ ದಿನ ಸಂತನ ನೆನೆಯುತ
ನುತಿಸುತ ಹರಕೆಯನಾಡುತ್ತ
ಮಾತನು ಹೃದಯದ ತುಡಿತಕೆ ನಡೆಸುತ
ಆತಗೆ ಮಣಿಯುತ್ತಿದೆ ಚಿತ್ತ.

# ಸ್ವಾತಂತ್ರ್ಯ ದೇವಿಗೆ

ತುಳಿದ ರಭಸಕೆ ನೆಲವೆ ಬಿರಿವಂತೆ, ಬಿಡುಗಡೆಯೆ,
ಇಳಿತಂದೆಯಾ ಪರಮರೌದ್ರವನು ಮೆರೆದು
ನಿನ್ನ ಭಜಕರ ತಪಕೆ ಒಲಿವರೂ ಈ ಎಡೆಗೆ
ಬರೆ ಬಿಂಕಗೊಂಡಂತೆ ಸೌಮ್ಯತೆಯ ತೊರೆದು
ಭಾರತದ ಸಾಧುಜನರಾತತಾಯಿಗಳಾಗೆ
ದುರ್ಮೋಹ ಧೂಮದಿಂ ಚಿತ್ತವನು ಕವಿದು
ಕಾಂಬವರು ಕಂದೆಗೆಯೆ ವಿಪುಳ ತೇಜಮೊಳುರಿದು
ನೀರಸರು ಸಿಡಿಮೊಡೆವ ತೆರದಿ ಕಿಡಿಗರೆದು

ನೀ ಬಂದೆಯಂದು ಬಾನುಳಿವ ಸ್ವರ್ಗಂಗೆಯಂತೆ
ಶಿವನ ಹೃದಯವ ತುಳಿದು ನರ್ತಿಸುವ ಕಾಳಿಯಂತೆ
ವಿಷದ ಮುಂಗಾವಲಂ ಕೊಂಡು ಬಂದಮೃತದಂತೆ
ನಿನ್ನ ನೆನೆದವರೂಹೆಗೆಟ್ಟಾಸೆ ಹಿಂಗುವಂತೆ.

ಶುಭದ ಶಂಖಧ್ವನಿಯ ಓಂಕಾರದಾಹ್ವಾನ
ಜಯ ಜಯೆಂಬುಗ್ಗಡಣೆ, ಸ್ವಸ್ತಿಸ್ವಸ್ತ್ಯುಕ್ತಿ
ಮರುಚಣವೆ ದುಃಖಾರ್ತಲೋಕದಾಕ್ರಂದನವು
ಲೋಭದುರ್ಮದಮೋಹವೈಷಮ್ಯಮುಕ್ತಿ
ಕೃತಕೃತ್ಯತೆಯ ಸೊಗದ ಸಂಮೋದ ಸಂಭ್ರಮದ
ಜತೆಗೆ ರುಷ್ಟೋದ್ರಿಕ್ತ ಜನದ ನಿರ್ಹ್ರಾದ
ನಿಶ್ಶೃಂಖಲತೆಯೊಡನೆ ಉಚ್ಛೃಂಖಲಾವೃತ್ತಿ
ವಿಶ್ವಮಾನಿತೆಯೊಡನೆ ವಿಶ್ವಾಪವಾದ—

## ಸ್ವಾತಂತ್ರ್ಯ ದೇವಿಗೆ

ಇಂತಾತ್ಮ ತ್ರೈಗುಣ್ಯಬಂಧಗಳ ಎಲ್ಲೆ ಮೀರಿ
ಉದ್ರಸೋಜ್ವಲವಾಗಿ ನವರಸಗಳೆಲ್ಲವನು ತೋರಿ
ನಿನ್ನು ಸಿರಕೊಂಡೆದ್ದ ಜೀವಬುದ್ಬುದಗಳೆಂತು
ಭಾವವಿಸ್ಫುರಣವಂ ಕೊಂಡವೌ ಸ್ಫುಟಿಸುವಂತು !

ಭಕ್ತವಿಶ್ವಾಸದಿಂ ಪಾರ್ಥನಿದಿರೊಳು ನಿಂದ
ವಿಶ್ವರೂಪದ ಅಪ್ರಮೇಯನಂ ಹೋಲಿ
ಮಾತವಸಿಯಿದಿರಿಂತು ನೀ ನಿಲ್ಲೆ ಕಾಣುತ್ತ
ಭೀತಿ ವಿಹ್ವಲನಾದನಾ ಸತ್ವಶಾಲಿ
ತನ್ನಳತೆಗಳವಟ್ಟು ಮಮತೆಯೊಳೆ ನಡೆದಂಥ
ದಿನದ ಬಳಕೆಯ ಕನಸು ಇಂಥ ಕಣಸಾಯ್ತೆ
ತನ್ನ ನಯಸಂಪನ್ನವಾಗಿದ್ದ ಬದ್ಧಜನ
ಸ್ವಾಚ್ಛಂದ್ಯದೊಳಗಿಂತು ದುರ್ದಮ್ಯವಾಯ್ತೆ!–

ಈ ಅಚಿಂತ್ಯಕೆ ಚಿತ್ತ ಕೋಗ್ರೈಸೆ ಕುರುಡನಾಗಿ
ಉಪವಾಸದಿಂ ತವಿಸಿ ಮುದನೀಗಿ ಮೌನಿಯಾಗಿ
ಓ ರುದ್ರೆ ಭದ್ರಳಾಗೆಂದು ಒಮ್ಮನದೊಳೆರೆದಂ
ಎಲ್ಲ ಮನದೊಳಗಿಂತೆ ಮೊರೆಗೊಡಲು ತನುವ ಮರೆದಂ

ದೇವಿ, ಸ್ವಾತಂತ್ರ್ಯಾಂಬೆ, ಎನಿತು ಶತಶತಮಾನ
ನಾವೆರೆದು ಕಾದಿಹೆವು ನೀ ಬಿಜಯಗೈಯೆ
ಎನಿತು ದೇಹದೊಳೆನಿತು ರೀತಿಯೊಳು ನಿನಗಾಗಿ
ಎನಿತು ಸೊಗದಾಹುತಿಯ ನಿತ್ತೆವೌ, ತಾಯೆ.
ಪರಶಿಶಿರ ಶೈತ್ಯದೊಳು ಋಷಿತೇಜದುಷ್ಣದಿಂ
ನಮ್ಮ ತಾಯ್ನೆಲ ಬದುಕೆ ಕಡುಪಾಡ ಪಡುತ

ಜಾತಿ ಜಾತಿಯ ಗೂಢ ರೂಢಿಗಳ ಮೂಡೆಯೊಳು
ಅವಳ ಸತ್ವದ ಬೀಜಗಳನು ಕಾಪಿಡುತ

ಕೊನೆಗೆ ನೀನೈತಂದೆ, ಶುಭ ಸುಪ್ರಭಾತವೆಂದೆ
ಮುಂಜೀಗ ತಂದವಳು ನಂಜ ಮರೆಗೇಕೆ ನಿಂದೆ?
ಅರಿಷಟ್ಕಕೊಲಗೆ ಮೊದಲವಕೆ ಈ ರೌದ್ರಬೇಕೆ
ದುರ್ಗ್ರಹೋಚ್ಚಾಟನಕೆ ಕೊಟ್ಟಬಲಿ ಇನ್ನು ಸಾಕೆ?

ಎಂತಾದರೂ ಸರಿಯೆ, ಇಲ್ಲಿ ನೀ ನಿಲ್ಲವ್ವ
ಏನಾದರೂ ನಮ್ಮ ನೀ ತೊರೆಯಬೇಡ
ನಿನ್ನ ಅಭಯದ ವರಮೊಳಿಲ್ಲ ಭಯಗಳ ನೀಗಿ
ವಿಶ್ವತೋಮುಖವಾಗೆ ನಡೆಸು ಈ ನಾಡ
ಸ್ವಾರ್ಥಿಗಳ ಲೋಭಕ್ಕೆ ಮತವಳರ ಕಾಮಕ್ಕೆ
ಧ್ಯೇಯ ಮೋಹಕು ನಾವು ಸಲ್ಲದಂತಿರಿಸು
ಕ್ಷೇಮಮಿತಿಯುದ್ಯೋಗ ಹೃದಯಮಿತಿ ವಿಜ್ಞಾನ
ವಿಶ್ವಮಿತಿ ನಮ್ಮಾತ್ಮವಾಗಲನುಗೊಳಿಸು.

ಸಂತನಸುವೇ ನಿನಗೆ ನಾವಿಡುವ ರಾಮುರಕ್ಷೆ
ನಿರ್ಬಾಧ ಪೌರುಷೋತ್ತಮ್ಯವೇ ಬಯಸುಪ ಭಿಕ್ಷೆ
ಇಂದು ಉದಯದ ಮಂಜುಹರಿದು ಹಗಲಾಯಿತೆಂಬೆ
ದೇವಿ, ಜಯಜಯ, ಶರಣು, ಹರಸು ಕೈಮುಗಿವೆನಂಬೆ.

# ಜಯು ನವಭಾರತಕೆ

( ೨೬-೧-೧೯೫೦ )

ಕಿರೀಟಪತಿಗಳ ರಾಜ್ಯವಿದಲ್ಲ
ನಮ್ಮೀ ಭಾರತದೇಶ
ಈ ಮೊದಲಿನ್ನೀ ರಾಜ್ಯದಿ ನಡೆವುದು
ನಾಡ ಮಕ್ಕಳಾದೇಶ—

ಎಂದುಗ್ಗಡಿಸುವ ಬಿರುದಿನ ಬಾವುಟ
ವೇರಿತು ದಿಲ್ಲಿಯ ತುದಿಗೆ
ಬಿಸಿರಕುತದ ಹುಸಿಯಲ್ಲದ ಕನಸಿನ
ಧೀರರ ಬಗೆಬಾನ್‌ಬದಿಗೆ.

ಚಳಿಮುರಿಯದೆ ಹಿಮಹಿಂಗದೆ ಜನ ಮುಂ-
ಜಾನೆಯೊಳೆಚ್ಚರೆ ಬೆದರೆ
ಸುಖಪುರುಷರು ನಿದ್ರೆದಿಗಡೆ ಹೊರಟಿತು
ದಿಬ್ಬಣ ಹಳಮನವದಿರೆ.

ಹೊಸತೀ ನೆಲ ಹೊಸತೀ ಜನ ಹೊಸತೀ-
ಜದ ಬಾಳೀ ಭಾರತಕೆ
ಎನೆ ಹೊಸ ಜಗ್ಗಿನ ಹೆಜ್ಜೆಯ ಲಾಗಿನ
ನಡೆ ನಮ್ಮೀ ಯುವಜನಕೆ.

ಉದುರುವ ಹಣ್ಣೆಲೆ ಹೊಸ ಚಿಂದಳಿರಿಗೆ
ಗೊಬ್ಬರವೆಂತುಟೊ ಅಂತು

ಹಳೆಯ ರೂಢಿ ಹುಡಿಗೂಡಲು ಹೊಸತರ
ಹುರುಪೆಮಗಾಯಿತಿದಿಂತು.

ಮುಮಡಿದ ವಿಜ್ಞಾನದ ಹೆಡೆ ಬಿಚ್ಚುತ
ನಮ್ಮೊಳ ಪ್ರಜ್ಞೆಯನಂತ
ತನ್ನೆದೆ ತಲ್ಪದೊಳಿಹ ಮಂಗಳವನು
ಕಾಪಿಡೆ ತೊಟ್ಟಿಹ ಪಂತ.

ತನ್ನರಿಪಿಸಂತೆ ತನ್ನಿರವಾಗಲು
ಹವಣಿಸುತಿದ್ದಿಹೆ ನಾಡು
ಪರರಿಗಲ್ಲಪೆಮ್ಮುಜ್ಜುಗಕಾಯಿತು
ಸರ್ವ ಸಮೃದ್ಧಿಯ ಜಾಡು.

ಜಗಳಗಂಟರಲ್ಲಬಲರಲ್ಲನಾ-
ವೆಮಗಿನಿತಿಲ್ಲವು ಕರುಬು
ಅಂಜೆವಂಜಿಸೆವು—ಎನೆ ಗೆಲುವಾಯ್ತೋ
ಬಾವುಟವಾಡುವ ಜರುಬು.

ಕಿವಿಗಿನಿದೀ ಜಯ ಜಯಘೋಷಣೆ, ಕಣ್-
ಗಿನಿದೀ ಹಮ್ಮಿನ ಪರಿಷೆ
ಮೆರವಣಿಗೆಯಿಗೋ ದೈವವು ಧೀರರಿ-
ಗೆರೆವಾ ಶುಭಗಳ ವರಿಷೆ.

ಜಯ ಶುಭಮಂಗಳ ನವ ಭಾರತಕೆ
ಸಲ್ಲಲಿ ಸಂತರ ಹರಕೆ
ಶುಭಾ ಶುಭವ ತನ್ನಿಚ್ಛೆಗೆ ನಡೆಸುವ
ಸರ್ವೋದ್ಧಾರಕ ಶಿವಕೆ.

ಅವಾಚ್ಯವಾಗಲಿ ದೇಹಿನಾಸ್ತಿಯೆಂ–
ಬುಕ್ತಿಗಳೆಮ್ಮೀ ಜನಕೆ
ಮಿತಹಿಂಸೆಯೊಳಮಿತಪ್ರೇಮಮೊಳೀ–
ಆಳಿಕೆ ಲೋಕದ ಹಿತಕೆ.

ಸಿರಿ ಹೆಚ್ಚಲಿ ಸೊಗವೆಚ್ಚಲಿ ಬುದ್ಧಿಯೊ–
ಳಿಂದ್ರಿಯ ನಿಗ್ರಹಕೊಲಿಸು
ದುಃಖವ ಕರುಕಿಡದಾನಂದವ ಪಡೆ–
ದೀ ನೆಲ ಬಾಳಲಿ ನಲಿದು.

# ಈ ತಿಂಗಳು ಜನವರೀ

( ೧೯೫೭ ರಲ್ಲಿ ಭಕ್ತಾಭಕ್ತರ ಮಾತು )

ಈ ತಿಂಗಳು ಜನವರೀ
(ಏನಾದರೆ ಏನರೀ ?)

ರವಿ ತಿರುಗಿದನುತ್ತರಕ್ಕೆ
(ಸಮಯವೆಳ್ಳು ಬೆಲ್ಲ ಮುಕ್ಕೆ)
ಕ್ರಾಂತಿ ಸಂಕ್ರಾಂತಿಯಕ್ಕೆ !
(ನಮಗುಳಿವುದೊ ನಮ್ಮ ಪಕ್ಕೆ ?)
ಈ ತಿಂಗಳು ಜನವರೀ !
(ಏನಾದರೆ ಏನರೀ ?)

ಈ ತಿಂಗಳು ಗಾಂಧಿಸತ್ತ
(ಸತ್ತು ಕಳೆದನಾರ ಕುತ್ತ ?)
ನಾಡಿದಾಯ್ತು ಸುಸ್ವತಂತ್ರ
(ಆವ ಕಲಿಯ ಕುಹಕತಂತ್ರ ?)
ಇಂದಾಯಿತು ಜನವರೀ !
(ಏನಾದರೆ ಏನರೀ? )

ಈ ತಿಂಗಳು ಮೊದಲಿಟ್ಟಿತು
ಮೂಗುಜನದ ಮೊಗದಾಯ್ಕೆ.
(ಜಡಧಿಯೊಳಾರುತ್ಸವ ಕೀ
ಧನ ದಾಕ್ಷಿಣ್ಯದ ಹಾಯ್ಕೆ ?)

## ಈ ತಿಂಗಳು ಜನವರೀ

ಪ್ರಜೆಗೆ ಸಂದಿತೀ ತಿಂಗಳು
    ಬಹುಕಾಲದ ಪೂಣ್ಕೆ.
(ಕುದುರೆಗಂತು ಕೋಲತುದಿಯ
    ಕೆಂಗೆಣಸಿನ ಠಾಣ್ಕೆ!)
        ಈ ತಿಂಗಳು ಜನವರೀ
        (ಅದು ಸರಿ ಮುಂದೇನರೀ?)

ಇನ್ನು ಬೆಳೆವುದೆಮ್ಮ ಕಲಾ.
(ಏನೀ ವೃದ್ಧರ ಚಪಲ!)
ಹುಲುಸುವುದಿನ್ನೆಮ್ಮ ನುಡಿ.
(ನಮಗೇಕೀ ನಾಲಗೆ ಮಡಿ!)
ನಮ್ಮ ವಿದ್ಯೆಯಿನ್ನೆಮಗೆ.
(ಬಂದಿತೆ ಗುಹೆವಾಸದ ಬಗೆ?)
ನಮ್ಮ ನಮ್ಮದೀ ರಾಜ್ಯ!
(ಯಾರದು ಯಾರಿಗೆ ತ್ಯಾಜ್ಯ!)
        ಈ ತಿಂಗಳು ಜನವರೀ
        (ಸರಿ ಸರಿ ಮತ್ತೇನರೀ?)

ಎಲೆಲೇ ಪಾಯಸಮಕ್ಷಿಕ,
    ನಿನಗೇಕೀ ಕಿಂಕೃತಿ?
ಭೋ, ವಾರ್ಷಿಕ ಹೃಷ್ಟಭೇಕ,
    ಮೊಳಗಿಸು ಜಯ ಝಂಕೃತಿ!
        ಇಂದಾಯಿತು ಜನವರೀ!
        ಅದರಿಂದೆಮಗೇನರೀ?

## ಕೊಳದ ಹೇಳಿಕೆ

“ಹೊನಲಿನ ಗೆಲುವಿಲ್ಲಿದಕೆ
ಕಮರಿಯ ಹಾರುವ ಸಾಹಸವಿಲ್ಲಿದಕೆ
ಕನಿಕರದಿಂದಲಿ ಗಾಳಿ
ತಳ್ಳಲು ಚರಿಸುವುದಲೆ ಹೆಳವನ ಹೋಲಿ
ಹರಿಯದು ತನ್ನಿಂದಾಚೆ
ಇದಕೆದೆಯೊಳು ದಿವಕೆಡೆಗೊಡದಿಹ ಪಾಚಿ
ಚೆಲುವಿದರೀ ಸೋಪಾನ
ಇದಕಾದೊಡೆ ಚಲಿಸುವ ಹಾಡುವ ಶುಚಿಗೊಳ್ಳುವ ಋತ ಊನ.”

ಇಂತೆನ್ನನು ಜರೆಯದಿರು
ಹರಿಸುವ ಋತ ಸಲ್ಲದು ಕಟ್ಟೆಯ ಇದಿರು
ಆದೊಡೆ ಚ್ಯುತಿಯಿಲ್ಲದಕೆ
ಈ ಮುಲುಗುಟ್ಟುವ ಹುಳುವಾಯ್ತಾ ಋತಕೆ
ಮೇಣೀ ಹಾವೀ ಕಪ್ಪೆ
ಇಕೊ, ಈ ತಾವರೆ ಹೂ! ಇದು ನಿನಗೊಪ್ಪೆ?
ಎನೆ ಕೊಳ, ನಾ ಬೆರಗಿಂದ
ಉಡುಗಿದ ನಡೆ ಉಲಿಯದ ಹಾಡೀ ಹೂವಾಯ್ತೆನೆ
ಕೊಂಡೆನು ಬೆರಗಿಂದ.

# ಇರುವು ಮತ್ತು ಧರ್ಮಗಳ ಹಾಡು

ಇಹುವೆನ್ನಲಿರವಿಲ್ಲ ಇಲ್ಲವೆನಲಿಹುದಿರವು
ಇದರ ತೆರನರಿವರಾರವನೊಬ್ಬ ಹೊರತು
ಜನ್ಮಮೃತ್ಯುಗಳೆರಡು ತುದಿನಡುವೆಯಾಡುವೀ
ಜೀವಲೀಲೆಯ ಮರ್ಮಸ್ರೋತವರಾರರಿತು ?

ಬಿಂದು ಬಹುವಾಗೊಡೆದು ಅಂಗಾಂಗವಾಗುತ್ತ
ಒಂದಾತ್ಮ ತಾನ್ನೆನ್ನುವನುಭಾವವೊಂದಿ
ಪಂಚಭೂತಗಳೊಡನೆ ಅದು—ತಾನು ಎಂದೆನುತ
ಬೇಹರಿಸಿ ಬೇಹಾರ ತೀರೆ ತಾ ಸಂದಿ ;

ತನುತನುಪ್ರೊಳಷ್ಟಷ್ಟು ದೇಶವನು ತಾ ತುಂಬಿ
ಕರ್ಮಗಳಿನಷ್ಟಷ್ಟು ಕಾಲವನು ತುಂಬಿ
ಮಮತೆಯೊಳಗಷ್ಟಷ್ಟು ವಿಶ್ವಾತ್ಮವನು ತುಂಬಿ
ಅಹಮೆಂದು ನೊಂದು ನಲಿದಾನಂದ ತುಂಬಿ

ಸೃಷ್ಟಿಮೊದಲಿಂದುವರೆಗಾಗಿಹೋದವರೆಷ್ಟು!
ಆದವರು ಹೋದವರು ಆಗುವವರವರೇ.
ಅರ್ಥಕಾಮಗಳಿಡುವ ರತಿವಿರತಿ ಛಂದಕ್ಕೆ
ಭೂತರಂಗದಿ ಜೀವ ನರ್ತಿಸುವುದರರೇ !

(೨)

ಈ ಮಹಾನಾಟ್ಯವನು ಜೋಡಿಸುವ ಚಾಲಕನು
ಈ ಚಿತ್ರಗತಿಗಾನವಿನ್ಯಾಸಿ ಯಾರು ?
ಇಲ್ಲಿ ಕೊಂಕಲ್ಲಿ ಋಜು ಇಲ್ಲಿ ಕಟುವಲ್ಲಿ ಮೃದು
ಅಂತು ರಸ ಕೊನೆಗಮೃತ ವಿಂತೆಸೆಪನಾರು ?

ಧರ್ಮವದು ಜೀವನದ ಮರ್ಮವದು ಚೇತನರ
ಸಮುದಾಯಮಂಗಳಕೆ ಅದರಂಕೆ ರಕ್ಷೆ
ದೇಹಾಂಗದರಿವೆಲ್ಲ ಜೀವಾಣುಗಿರುವಂತೆ
ಅರಿವರಿವ್ಪೊಳಿಪುದಿದರ ಧೃನ್ನಿಷ್ಠ ನಕ್ಷೆ.

ಈ ನಕ್ಷೆಯಂತಾಗೆ ಅರ್ಥಕಾಮವಿಕಾಸ
ಎಂಥ ಶುಭಮುದಯವಪುದೆಲ್ಲ ಜೀವರೊಳು !
ಧರ್ಮಾರ್ಥ ಕಾಮಗಳ ಈ ಪರಸ್ಪರವಶತೆ
ದುಸ್ಸಾಧ್ಯವೀಜಗದೊಳದಕೆ ಭವದಳಲು.

ಒಂದುಸಿರು ಹಲವ್ಪೊಡಲು ಒಂದರಿವು ಹಲವು ಮನ
ಒಂದೆ ಆನಂದಕ್ಕೆ ಹಲಹಲವು ಹೃದಯ
ಇಲ್ಲಳಿಯಲಲ್ಲುಳಿವು ಇಲ್ಲಿ ಮುಳುಗಲ್ಲೆದ್ದು
ಅರ್ಥಕಾಮಗಳಂಕೆಗಿಡೆ ಧರ್ಮದುದಯ.

ಹಲವರಿದ ಧಿಕ್ಕರಿಸೆ ಕೆಲವರೊಳಗುಜ್ವಲಿಸಿ
ಭೋಗಿಯೋಡಿಸೆ ನಿಷ್ಠ ಯತಿಯನಾಶ್ರಯಿಸಿ
ಹಲರತೀಂದ್ರಿಯರಾಗೆ ಕೆಲಜಿತೇಂದ್ರಿಯರಲ್ಲಿ
ತೂಕ ತಪ್ಪಿದ ಜಗವ ಸಮತೂಕ ನಿಲಿಸಿ

## ಅರಿವು ಮತ್ತು ಧರ್ಮಗಳ ಹಾಡು

ಅರಿವೊಳಿಲ್ಲೋ ನಿಂತು ಶಿವವ ಸಾಧಿಸುತಿಹುದು
ಲೇಸುಕೇಡಳಿವುಳಿವ ತಕ್ಕಂತೆ ಬಳಸಿ
ಆ ಧರ್ಮಭೃದ್ವರರ ನೆನಪನರಿವೊಳು ಧರಿಸಿ
ಶಂಕೆಯೆಲ್ಲವಕಳೆವ ಶಿವಕೆ ಬಗೆ ಬೆಳಸಿ.

ಕಾಡದ ಮೈಯಿಲ್ಲ
ಕೂಡದ ಮನವಿಲ್ಲ
ಲೇಸಿರುವೆಡೆಯೇ ನೆರಳಂತಿರುವೆವು
ನಂಟರು ನಾವೆಲ್ಲ !

# ದಾಳಿಂಬೆ

ಇದು ಮೀಸಲೇ ನನಗೆ, ಈ ಬೆಳ್ಳಿಬಟ್ಟಲೊಳು
ರತ್ನಕಾಂತಿಯ ಚೆಲ್ಲಿ ಕಳಕಳಿಪ ದಾಳಿಂಬೆ ?
ನೂತ್ನ ಋದ್ಧಿಯ ಪಡೆದ ಮೋದದೊಳಗೀ ಜಿಹ್ವೆ
ಇದುವರೆಗು ಕಾರ್ಪಣ್ಯದೊಳಗಿದ್ದೆನೆನುತಿಹುದು

ಚಿತ್ರಚಿತ್ರದ ರಸವ ಸವಿಮು ಸವಿದಾಕ್ಷಣದಿ
ಆಯುಷ್ಯ ಸಾರವನು ಬಟ್ಟಿಯಿಳಿಸುವ ತೆರದಿ.
ದೇಯವಿದನಾ ರೂಕ್ಷ ವೃಕ್ಷವೀ ಪೃಥ್ವಿಯಿಂ
ದೆತ್ತಿ ಈ ಮುದವೆಗೆಸ್ರೋಲಾವರ್ತಿ ಚೋದಿಸಿತು ?

ಋತುಋತುಗಳಾದರವ, ಗಾಳಿಯುಪ್ಪುಗೆಸೊಬಗ,
ಬೆಂಗದಿರ ರಕ್ತಿಯನು ತಂಗದಿರ ಸಕ್ತಿಯನು
ತಂಗಿಸಿತೊ ಮಳೆಮಂಜಿನೊಲವ ಮಧುರಾಮ್ಲಮೊಳು
ಇತರೇಂದ್ರಿಯ ದ್ಯುತಿಯ ರಸನೆಗನುವದಿಸುಪ್ರೊಲು ?

ರಸವಿದೇನಿದ ಸವಿವರಾರ್ ಏನಿದಚ್ಚರಿಯ ಭೋಗ
ರಸನೆಹಸೆಯೊಳಗಿಂತು ಪ್ರಕೃತಿ ಪುರುಷರ ದಿವ್ಯಯೋಗ !

# ಇರುಳು—ನಿದ್ದೆ

ತೆರೆಗೆ ಸಂದಿತು ದಿನಕೆ : ನಿಶೆ ತುಂಬಿರುವ ಪ್ರಾಣ-
ಪಾನ ಪಾತ್ರೆಗಳಿಂದ ಚೈತನ್ಯ ರಸವೀಂಟಿ
ಭಾನು ಸಂದನು ಮನೆಗೆ. ತಾನೆ ತಾನಾಗು ತಾಯ
ತೆರವಿನ ಮಹಾತಮದ ನಂಟು ತನಗಾಯ್ತೀಗ.

ಅಂಬು ಕೋಶವ ತೊಗುಪ್ರೇಲಾಕೃಷ್ಟವಾಮುವೆನೆ
ಮರದ ಬತ್ತಳಿಕೆಯೊಳು ಲೀನವಾದವು ಹಕ್ಕಿ.
ಇರುಳಿನರಸಿತಿ ನಿದ್ದೆಯಿಳಿತಂದಳಿಹಕಿಮೋ
ಇಂಬಾಗೆ ಜಗವೆಲ್ಲ ನೈಷ್ಕರ್ಮ್ಯನಿರ್ವೃತಿಗೆ.

ಎಂತವಶಮೊಯ್ಯುತಿದೆ ಸರ್ವ ಸಮತೆಗನನ್ಯ-
ಶರಣತೆಗೆ ಕರಣವಿಷಯದ ಲೋಕ ಭ್ರಮೆಯೆಂಬ
ಎರಡಲ್ಲಮೊಂದೆಯಿರವಿರುವೆಂಬ ನೆಲೆನನ್ನಿ-
ಹಂತಕ್ಕೆ ಸಕಲಸೃಷ್ಟಿಯನೊಯ್ಯುನೀ ನಿದ್ದೆ

ಭವನಿಷೀತಾತ್ಮವನು ಸುಪ್ರಜ್ಞೆಗದ್ದುವಂತೆ
ಸತ್ಯಶಿವನಿಧಿಯೆಮ್ಮದೆಲ್ಲವನು ಹೊದ್ದುವಂತೆ!

# ಬಿಡುವು

ಆಹ ಬಿಡುವೆ, ಶ್ರಾಂತಿ ದಯಪಾಲಿಸಿಹ ನಲ್ವರವೆ,
ಎನಿತು ಚೆಲುವಾಗಿಸಿದೆ ಈ ಬಳಕೆ ಸಂಜೆಯನು !
ದಿನದ ಸ್ವರ್ಣಾದಾಯದಿಂ ದ್ಯುತಿಪ ದಿವಕಭ್ರ ;
ತುಹಿನಕಿರಣನ ಕೋಡು ಮುದದ ಮದ್ದಾನೆ ಬಾನ್-

ಸರದೊಳಗೆ ಮುಳುಗಿ ಕೋಡೆತ್ತಿದೊಲು ತೋರುತಿದೆ ;
ಹಲಸು ಸಂಪಿಗೆ ಮಾವು ತೆಂಗು ತೆಂಗಿನ ಬಳಗ
ಬಳಸಿ ತುರುಗಲ ನಡುವೆ ರೇಖಿಸಿಹ ಕರುಮಾಡ
ತರುವುವಕ್ಷಿಗೆ ಯಕ್ಷ ರಾಜಧಾನಿಯ ಬೆರಗ.

ಪ್ರತ್ಯಕ್ಷ ಕಿಂದಾಯ್ತು ಭವನಿಯುಕ್ತಿವಿಮುಕ್ತಿ.
ಋಣಮುಕ್ತ ಬಂಧುವನು ಮಾನಿಸುವ ಕುಲದಂತೆ
ಮನವ ಮಾನಿಸುತಿಹುದು ಕಂಡುದನೆ ಚೆಲುವೆಂಬ
ಸತ್ಯದರಿವಿಂ ಸೃಷ್ಟಿ. ಮುಗಿಲಮರೆತಾರೆಯಿಗೊ

ತುಡಿಯುತಿದೆ ರಾಧೆಯೊಲು ಕಾತರದ ನೋಟ ಬೀರಿ
ಘನಗಹನನೆದೆ ಬನದೊಳವಿತಿರುವ ಬಗೆಯ ತೋರಿ.

# ಬಿಸಮಿಲ್ಲರ ಸುನಾಯಿಯನ್ನು ಕೇಳಿ

ಮರುಗುವೆಯ ನೀ ಗೆಳೆಯ ನಮ್ಮ ನಾಡಿನ ಪರಿಗೆ:
ಜನವಿದಭಿಮಾನಕೃಪಣಮಸೂಯಾಭೂಯಿಷ್ಠ-
ಮನುಕರಣಪಟು ನಟನಶೀಲಮನವಸ್ಥಿತಂ
ಸಿರಿಯೊ ತಂದ್ರ್ಯೋಪಹತಮುಚ್ಛಿಷ್ಟಭೋಗಿಮನ-

ಮಸುರಕೋಭೋತ್ಸೃಷ್ಟವಿಜ್ಞಾನಯಂತ್ರಮದ-
ವಾರಣಾವಿಷ್ಟ ನಾಗರಿಕ ನಿಸ್ವಾದು ನಿ-
ಸ್ಸಾರಜೀವನಂ ಸ್ವಲ್ಪಾರ್ಥಮಲ್ಪಕಾಮಂ
ವಿಸರ್ಜಿತಶಿವಮಹೋ ವಿಗಳಿತಾತ್ಮವಿದೆಂದು ?

ಆಲಿಸು ಸುನಾಯಿಯನು ಕಲ್ಯಾಣದಾಯಿಯನು !
ಇರವಿನಂತರ್ನಭದ ವೈಶಾಲ್ಯವಾಳಗಳ
ಅರಿವಿನೊಳಗುಜ್ವಲಿಸುವಾತ್ಮಾನುಭೂತಿಗಳ
ಕಾಲಕಾಲವಕ್ರಮಿಸುತಸ್ವವೊಳೆ ತೋರುತಿದೆ

ಸ್ವರ್ಣಸ್ವಪ್ನಾಂಬರವ ತಾಯ್ನೆಲಕೆ ಮರಳಿಮುಡಿಸಿ
ಕೃಷ್ಣೆಗೊನವಿದ ದೈವಕರುಣೆಯೊಲು ಚೇನವಳಿಸಿ.

# ಗೊಮ್ಮಟಜಿನನನ್ನೂ ಶ್ರವಣಬೆಳುಗೊಳವನ್ನೂ ಕುರಿತು

ಪ್ರಣತಾರ್ತಿಪಂಕದಿಂ ಕಪ್ಪಿಡಿದ ಪಾದವವ
  ವಿಧಿಯಿಚ್ಛೆ ಸ್ತಬ್ಧಗೊಳೆ ಮುಗ್ಧ ಕಾಮಾಂಗವವ
  ಎದೆ ಹಿಗ್ಗಿ ಮೈತಂದಿತೆನೆ ಪುಷ್ಟಧವಲಾಂಗ
ಎಣೆಯಿರದ ಗೆರೆಗೊರಲ ಪಣೆಗುರುಳ ಸೊಸಲವನು

ದರಹಾಸವನು ಸೂಸಿ ದಯೆಯ ಮಕರಂದವನು
  ಹನಿಸುತ್ತ ಚುಂಬನೌತ್ಸುಕ್ಯವನು ಕಾಂಬರೊಳು
  ಕೊನರಿಸುವ ಶಿಶುರಮ್ಯ ಸ್ನಿಗ್ಧಮಧುರಾಧರನು
ಹೊರಮುಟ್ಟುಗಳನೆಲ್ಲ ಕಳೆದ ಪರಿ ಅರೆಮುಗಿದು

ಒಳಗುಗುವ ಚಿತ್ಸುಖವ ಪ್ರತ್ಯಕ್ಷಗೊಳಿಸುವೊಲು
  ಕಣ್ಣರೆತೆರೆದು ಮಿದುನಗೆಯೊಡನೆ ಕಳೆಗೊಳಿಸಿ
  ತನ್ನ ಸುಖವನ್ಯರಿಗು ದೊರೆವೊಲನುಕಂಪಿಸುತ
ಇಳೆಮುಗಿಲ ಸೋಪಾನಮಾರ್ಗದೊಲು ನಿಂತನಿವ–

ಎನಲಿಪನು ದಿವ್ಯನಾತ್ಮಧ್ವಜಂ ಗೊಮ್ಮಟ ಜಿನಂ
ಪದತಲದಿ ಕ್ಷಣಕ್ಷಣಕು ಹಿಂಗುತಿದೆ ಪುರಜೀವನಂ.

# ಪ್ರಥಮೈಕಾದಶೀ

ಭವಸುತ್ಸವಾಗ್ರದೊಳು ಮೆರೆವ ಗಣದುರವಣೆಯ
ಹೋಲಿ ಭೋರಿಡುತಿಹುದು ಆಷಾಢದೀ ಗಾಳಿ
ಓಲಾಡೆ ಗರಿಕೆದರುತಾವೇಶದೊಳು ತೆಂಗು
ತವಕದೊಳು ಹುಯ್ಯಲಿಡೆ ಬೀಳದೊಲು ಬಿಗಿಹಿಡಿವ

ಮರದ ಮಮತೆಯ ಗೂಢ ರಕ್ಷೆಯೊಳು ರೆಂಬೆಯೆಲೆ.
ಬಾನ ತುಂಬಿಹ ಗಾಳಿಯಾಲಿಸುತ ತಣಿಯದಿದೆ
ಧ್ಯಾನಗೊಂಡೀ ಚಿತ್ತ, ಹರನ ಮೊಗವಾಡದೊಳು
ಸರಿವ ಶಿವದೀ ಗಹನನಾಟ್ಯಾರ್ಥಗಳ ನೆನೆದು.

ಎಲರ ವೈಹಾಳಿಯೊಳು ಮಳೆಯಿಳಿದು ಬೆಳೆ ಬೆಳೆದು
ಜೀವವುಜ್ಜೀವಿಸುವ ಋದ್ಧಿ ಋತವನು ನಡೆಸಿ
ಕಾವ ಕರ ಮತ್ತೊಂದು ಹಸ್ತದೊಳು ತಲೆಯೋಡ
ತಳೆದು ಬೇಡುತಲಿಹುದೊ ಕರಣಾರ್ಥವಿರತಿಯನು ?

ಈ ಬಹುವಭೋಗ ಭಿಕ್ಷುರವ್ರತರೆಮ್ಮ ಬಳಿಗೆ
ಬಂದು ಬರಿಗೈಯೊಳಗೆ ಮರಳಲೇನುಗತಿಯೆಮಗೆ.

# ಪುಣ್ಯಕ್ಷೇತ್ರಗಳಲ್ಲಿ ಕಂಡುಬರುವ ಜೀವಕಾಮುವನ್ನು ಕುರಿತು

ಗಡಬೆಳೆದು ಹುಡಿಗೂಡುತಿವೆ ಗುಡಿಯ ಗೋಪುರ
ಮುಟ್ಟಿ ವ್ಯೈಲಿಗೆಯೆನ್ನೆ ಪಾಚಿಗಟ್ಟಿವೆ ತೀರ್ಥ
ಅಟ್ಟ ಮಿಷ್ಟಾನ್ನವನು ತೊರೆದು ಹೆರಮನೆತಿರಿವ
ಜಡಮತಿಯ ವರ್ತನೆಯ ತೋರುತಿವೆ ಯುವಚಿತ್ತ.

ವಿಶ್ವಾತ್ಮನೊಳಕೊಂಡ ನುಡಿಗಳಕ್ಷಯಪಾತ್ರೆ
ಗಳಿತಸತ್ವರ ಕರದಿ ವೃತ್ತಿ ಭಿಕ್ಷಾಪಾತ್ರೆ.
ನೆಲದಿರವಿನುಚ್ಛೃತಿಯ ಮೆರೆದ ಸುಮನೋಗಂಧ-
ವಿಶ್ವಾಸವಿಂದಿಲ್ಲವೀ ಸಿದ್ಧರಾಶ್ರಮದಿ.

ಎಲೆ ಜೀವಕಾಮುವೇ, ನಿನ್ನ ತುಳಿತುಳಿದುತ್ತು
ಬಗೆಬಿತ್ತಿ ಕರಣೋಪಭೋಗಗಳ ಕಳೆಕಿತ್ತು
ಮಿಗೆ ಕಷ್ಟಮೊಳು ಸಾಧುಮುನಿಸಂತರೊಲವಿಂ ತೆಗೆದ
ಬೆಳೆಯ ದೇವಕ್ಷೇತ್ರ, ಅಂದಿನುಪಪೀಡನಕೆ

ಮುಯ್ಯಿ ತೀರಿಸುತಿಹೆಯ ಸ್ವೈರಿತೆಗೆ ಮರಳುತಿಂತೆ
ಚದುರಂಗಿ* ಯುಬ್ಬರಣೆಗಿಂಬಿನೀ ತೋಟದಂತೆ ?

* ಚದುರಂಗಿ—Lantana

# ಮಳೆ

ಅದಿಗೊ ದೆಸೆಕೂಡುವೆಡೆ ತಿರೆಗೂರುತಿದೆ ಮುಗಿಲು
ಹೆಬ್ಬಿದಿರ ಮೆಳೆಯ ಚೆಲುವನು ತೋರಿ, ಬಿಳಲೂರಿ
ಹಬ್ಬಿರುವ ಮಹಾವಟವೃಕ್ಷದೊಲು ಪಸರಿಸುತ
ಇದೆಕೊ ಎನುತಿದೆ ನನಗೆ ಮೈಬಿಡದ ಮಿಂಚಿಸೊಳು

ಕಾರೊಡಲ ಬಣ್ಣದೊಳು ತನ್ನ ಪನ್ನತಿಕೆಯನು
ಮೆರೆವ ಗುಡುಗಿನೊಳು ಗಿರಿಮೈತ್ರಿಯೊಳು ಸರ್ವಾರ್ಥ-
ಕರಕ್ಷೀರಧಾರೆಯೊಳು ಹಿಂಪೆ ತಾ ಹಿಡಿದಿಟ್ಟ
ನೂರಾರು ಕವಿಮುವಗಳೈಸಿರಿಯ ತೆರುವಂತೆ!

ಸನಿಯಕ್ಕೈದಿತು ಮಳೆ, ನೆನೆನೆನೆನೆದುವೆನ್ನ ಮೈ.
ಕುಳಿತೆಡೆಯೆ ಕುಳಿತಿಹೆನು ಚಿರಕಾಲವಭಿಲಷಿತ
ಸಲುವ ತೆರ. ಅರಿತರಾರೀ ಮೇಘವಾವ ಪಾ-
ವನ ನದೀತೀರ್ಥವನು ತಂದಿಹುದೊ, ವೇಂಗಡದ

ಮಲೆಮುಟ್ಟಿ ಬಂದಿಹುದೊ ಸೇಚನದೊಳೆನ್ನ ಹರಸೆ
ಕರುಣೆಯೊಳು ನಿಂತೆಡೆಯೆ ಅವಭೃಥಸ್ನಾತನೆನಿಸೆ?

# ಜಗಚೆಲುವೆನ್ನುವ ಬಗೆಯನುರಣನೆ

ಮೆಲುಗಾಳಿಯೊಳು ಗಿಡಪೆಲೆ ಹೊರಳೆ
ತಿಳಿಗೊಳದೊಳಗೆ ಕಿರುವೆರೆಯುರುಳೆ

ನಡುಬಾನಿನೊಳು ಬಿಳಿಮುಗಿಲಾಡೆ
ಸನಿಯದ ಹೊದರೊಳು ಹಕ್ಕಿಯು ಹಾಡೆ

ಗುಡಿಗಂಟೆಯರವವಾಗಸದೊಳಗೆ
ಮುಳುಗಿಪ ಭಾವವನೆತ್ತಲು ಮುಳುಗೆ

ತೊಟ್ಟಿಲಾಡುತಿರೆ ಸಂಪಗೆ ನೆಳಲು
ನೇರಿಳೆಗಾಗಿರೆ ಬಿಸಿಲಿನ ಬಿಳಲು

ಹಿಣಿಲನು ಕುಣಿಸುತ ಬಸವ ಬರುತಿರೆ
ರೆಂಬೆಯನಾಲಿಂಬಿಸಿ ಕಪಿ ಕುಳಿತಿರೆ

ಮಳೆಯುಸಿರಾಡುವುವೆನೆ ಕುರಿಮಂದೆ
ಚಲಿಸಿರೆ ಬಂಡೆಗಳೊಳು ಕೆಳೆಯಿಂದೆ

ಜಗದೀ ದೈನಂದಿನ ಜಂಗಮತೆ
ನನ್ನೊಳು ಜನಿಯಿಸಿತೇತಕೆ ಮಮತೆ?

ಈ ಹೊರ ಜಗಕೂ ನನ್ನೊಳಮುದಕೂ
ಏತರ ನಂಟೆಂತದಕೂ ಇದಕೂ?

ಶಾಸ್ತ್ರಾಗಮುಗಳ ಝುಂಕಿಸುವಂತೆ
ತರ್ಕಹೇತುಗಳ ಕೊಂಕಿಸುವಂತೆ

ನಿರ್ವ್ಯಾಜಂ ಬಹ ಹರಿಕೃಪೆಯೋಲು
ಮೋದದ ಕೃಪೆಗಿಂಬಾಯಿತು ಬಾಳು

ಜಗ ಚೆಲುವೆನ್ನುವ ಬಗೆಯನುರಣನೆ
ವಿಶ್ವಾತ್ಮನ ನಿರ್ಹೇತುಕ ಕರುಣೆ.

# ವಿದ್ಯಾಲಯ

ಈ ವಿದ್ಯಾಲಯಮುತ್ಸವ ಸಮಯದಿ
ಕಾಣಿಕೆಯಿದನೊಪ್ಪಿಸುವೆನು ವಿನಯದಿ
ಸವಿನೆನಪಿನ ಕಂಪಿಡಿದೀ ನುಡಿಯ
ಹಾಸುವೆ ನಾ ವಾಣಿಗೆ ನಡೆಮುಡಿಯ.

ಅಲ್ಲಿ ಮೂಡಿತೀ ಕವಿಚೈತನ್ಯ
ಅವಕಾಯಿತು ಪರಭಾಷಾಸ್ತನ್ಯ
ನಾಡತಾಯಿ ನಿರ್ಬಲೆ ನಿರ್ದುಗ್ಧೆ
ಆಂಗ್ಲವಾಣಿ ವಿಜ್ಞಾನಸುದುಗ್ಧೆ
ತಾಯ ಮಗುವಿಗೀ ದಾದಿಯ ಹಾಲು
ನೀಡಿದನಿತುಂಡು ಬೆಳೆಯಿತು ಬಾಳು
ಪ್ರಾಣದಾತೆ ವಾತ್ಸಲ್ಯವಿಹೀನೆ
ವಾತ್ಸಲ್ಯಪೂರ್ಣೆಯೋ ಬಹುದೀನೆ
ಧಾತ್ರೀಮಾತೆಗಳಿಂತಿರೆ ಹಸುಳೆ
ಅಂತೂ ಬೆಳೆಯಿತು ಆ ಇರಕಿನೊಳೆ.

ಇಂತಾಯಿತು ಕವಿಬಾಲ್ಯಚಿಕಿತ್ಸೆ
ತಾನಾರೆನೆ ಆತ್ಮದ ವಿಚಿಕಿತ್ಸೆ
ಅಲ್ಲಿದ್ದೆನು ನಾ ವಿದೇಶಿಯಂತೆ
ಎನ್ನರಾರಿಲ್ಲಿ ಎಂಬುದೆ ಚಿಂತೆ
ಮನೆಗುಡಿಯಂಗಡಿ ಚೌಕಗಳಲ್ಲಿ
ಕಾಣದ ಕೇಳದ ನಡೆ ನುಡಿಯಿಲ್ಲಿ

ಮರಮೊಳು ಸೊಗಸುವ ಬಂದಿಳಿಕೆಯ ತೆರ
ತೋರಿತು ವಿದ್ಯಾಶಾಲೆಯ ವಿವರ
ಋಷಿಕವಿಸಂತರ ತಪದಿಂ ಮೂಡಿದ
ಮನದ ಮೇಲೆ ಪರ ತಾಂಡವವಾಡಿದ.

ಸೊರಗಿದೆ ನೀ ವಿಧ್ವಂಸಕ ನೃತ್ಯಕೆ
ನಮ್ಮನಮ್ಮ ಪುಡಿಮಾಡುವ ಕೃತ್ಯಕೆ.

ಭಾರತಸ್ವಾಂತನಿರ್ವಂಶತೆಗೆ
ಜ್ಞಾತವ್ಯಜ್ಞಾನದ ಖರ್ವತೆಗೆ
ಜನಶಿವಸಂಕಲ್ಪದ ಪರವಶತೆಗೆ
ಪರಾನುಕರಣದ ಸರ್ವತ್ರತೆಗೆ
ಎಡೆಯಾದೀ ವಿದ್ಯೆಯ ನೆಲೆವನೆಯೊಳು
ನಾನಿದ್ದೆನು ಮಲತಾಯಿಯ ಮಗನೊಲು.

ಕಿವಿಯಿದ್ದೂ ಮನವಿಲ್ಲದ ಬಗೆಗೆ
ಬರಿ ಸದ್ದಾದುವು ಪಾಠಗಳೆನಗೆ.

ಎಲ್ಲ ಅಪರಿಚಿತ ಎಲ್ಲ ನವೀನ!
ಇಲ್ಲದಿರಲಿಲ್ಲವಿಲ್ಲಿ ಸುಮಾನ.
ಶಾಲೆಯೊಳಾತ್ಮಕೆ ಸ್ವಪ್ನದ ಮೌನ
ಪುಸ್ತಕಭಾಂಡಾಗಾರದಿ ಧ್ಯಾನ
ಹುಲ್ಲುಗಾವಲಿನ ಹೂತ ಮರಗಳ
ಎಲೆಗಳು ಬಿಡಿಸುವ ಬಾನ ಬಿಂದುಗಳ
ಲೆಕ್ಕದೊಳಾಯಿತು ನನ್ನಾಸಕ್ತಿ
ಪ್ರಕೃತಿಯೊಳಾಯಿತು ರಸದಭಿವ್ಯಕ್ತಿ.

## ವಿದ್ಯಾಲಯ

ಬಗೆದಂತಪ್ಪುದಲಾ ಜಡಲೋಕ
ಆದರಿಂ ಭಾವುಕಗಲ್ಲಿಯೆ ನಾಕ.
ಸ್ವದೇಶನಿರ್ಮಿತದೀ ಪರದೇಶದಿ
ಕೆಳೆಪಡೆದೆನು ನಾನಿವುಗಳ ಸನಿಯದಿ.

ಕೊಟ್ಟಿಷ್ಟನೆ ಮರಳಿಯು ಪಡೆವೀಪರಿ-
ಸೊಗದಿಂದಾತ್ಮದ ವೃದ್ಧಿಯೇಪರಿ ?
ಚೇತನದಿಂ ಚೇತನಮುಜ್ಜೀವನ
ಜೀವಿಯಿಂದ ಜೀವನಮುತ್ತೇಜನ.
ತನ್ನನು ತಾನೇ ಮರೆಹೊಗುವಾಟಕೆ
ಬೇಸತ್ತೆನು ನಾ ಬಯಲಿನ ಬೇಟಕೆ.
ಮನವರಿಯುವ ನುಡಿ ಎದೆಮೆಚ್ಚುವ ನಡೆ
ಶುದ್ಧಾಂತರ್ಯದೊಳಿರವಿನ ಬಿಡುಗಡೆ
ನುಡಿಗೆ ಬರದ ಬಯಕೆಗಳಿಗೆ ಸಾಕ್ಷಿ
ಕಾಣೆ ಬರದ ಕನಸನೋಡುವಕ್ಷಿ
ಪರಸ್ಪರಾಶ್ರಯವಿಂತಾಗುವ ಸೆಳೆ
ಈ ಜಗವೆಮ್ಮದು ನೋಡೆನ್ನುವ ಕೆಳೆ
ಈ ತೆರ ಸಾಧರ್ಮ್ಯದ ಸೌಖ್ಯದಕೆ
ಕಾಲದೊಳೆನಗಾಯಿತು ಹಂಬಲಿಕೆ.

ಆವನೆಲದೊಳೆನ್ನಾತ್ಮದ ಬೇರು
ಮನದೀ ಬೆಳೆಗೆ ಕೃಷೀವಲರಾರು
ಅರಿವರದಾರೀ ಬಾಳಿನ ಬೆಲೆಯ
ಕುದುರಿಸುವವರೀ ಜೀವದ ಕಳೆಯ ?—
ಈ ತೆರ ಕಾತರಗೊಂಡಿಗೆ ಜೀವ
ಸಂಸ್ಕೃತವಿತ್ತಿತು ಮಮತೆಯ ಠಾವ.

ಆ ತಾಯ್ನೆಲದೊಳು ತಳವೂರಿತು ಮನ
ಅಲ್ಲಿ ಮೊಗೆಯಿತೆನಗೊಬ್ಬನ ಕೆಳೆತನ
ಸರಳಹೃದಯ ಸಹೃದಯ ಮೇಧಾವಿ
ಧ್ಯೇಯೋಪಜೀವಿ ಸಹಾನುಭಾವಿ
ವಿದ್ಯಾವಿಪ್ಲವದಾ ಶಾಲೆಯೊಳು
ನನಗಾಯ್ತೀ ಸ್ನೇಹವೆ ಹರಿಗೋಲು
ಮುಂದಿನ ಕತೆಯೀ ದೋಣಿಯ ಬಿನದ
ಗುರುಸಾನ್ನಿಧ್ಯದ ಕ್ಷೇಮದೀಪದ
ಬೆಳಕೊಳು ಹದುಳದ ಹರ್ಷವ ತಳೆದು
ಹೊರನಾಡೆನ್ನುವ ಶಂಕೆಯ ಕಳೆದು
ತನ್ನತನದಿ ಹೀನಾಯವೆಣಿಸದೆ
ಮಿಕ್ಕವರೊಳು ವಿಶ್ವಾಸವಳಿಯದೆ
ಅನ್ಯದೇಶ್ಯದಾಸಂಪದವನೆಂತು
ಗಳಿಸಿಹನೆಂಬ ಕುತೂಹಲವಾಂತು
ಎಂತಾವಲೆದೆವು ಭಾವಲೋಕದಿ
ಚಿತ್ರಚಮತ್ಕೃತವಪ್ಪಾಲೋಕದಿ !

ಸಂಜೆ ರಂಜಿಸಿದೆ ರಂಗಿನ ಬೆಳಕೊಳು
ನಮ್ಮೊಳಗನೆ ಅದು ಬಿಂಬಿಸುತಿರುಪ್ಪೊಲು
ಹಾರ್ಡಿಯ ಕತೆಗಳ ಸುಂದರಿಯರಿಗೆ
ಪರಿವೇಷವಿದೋ ಎನೆ ಬಾನ್‌ತೊಳಗೆ
ಸಂಘದ ಕೊನೆ ಕಿರುಮನೆಯೊಳು ಕುಳಿತು
ನಾವೆಲ್ಲಿಹೆ ವೆಂಬುವನೇ ಮರೆತು
ಮಾತಿಲ್ಲದ ಮಾತೊಳು ನುಡಿದಾಡಿ
ಇರುಳಿಗಾಗೆ ಬಲು ಚುಕ್ಕಿಯ ಮೋಡಿ
ಮನವಲ್ಲುಳಿಸುತ ಸುಯ್ದುಗಲಿದ ಪರಿ

## ವಿದ್ಯಾಲಯ

ಮರುಕೂಟವೆ ದಿನದಾದಿಯೆಂನ ಪರಿ
ಈ ಭಾವದಾವಿ ಹನಿಯೊಡೆವ ಪರಿ
ನುಡಿಯಲೆಯಿಡುತಾ ರಸ ಹರಿವ ಪರಿ
ಈ ಝುರಿ ಮತ್ತೊಬ್ಬನ ಸೆಳೆವ ಪರಿ
ಈ ಸಂಗಮ ಹಿರಿ ಹೊನಲಾದ ಪರಿ
ಈ ತೆರ ನಮ್ಮೀ ಸ್ನೇಹತ್ರಿವೇಣಿಯ
ಮರ್ಮರವಂತಿರುವೆನ್ನಯ ವಾಣಿಯ
ಪ್ರಥಮೋದ್ಗಮ ಚರಿತೆಯ ಮಧುರಸ್ಮೃತಿ
ಈ ಶಾಲೆಗೆ ನಾನರ್ಪಿಸುವ ಸ್ತುತಿ.

ನೆಲೆಯಾಗಲಿ ಸರಸತಿಗೀಶಾಲೆ
ಸುತರಿಡಲೀಕೆಗೆ ಸುಯಶೋಮಾಲೆ
ಈಕೆಗಳಿಯಲೀ ಪರಾಭಿಭೂತಿ
ಹೊರಹೊಮ್ಮಲಿ ಸ್ವಾಂತಾತ್ಮವಿಭೂತಿ
ಹೊಳೆ ಹೊಳೆಸುತ ಸದ್ವಿದ್ಯಾರುಚಿಗಳ
ನಮ್ಮೀ ಶಾಲೆಯ ಗುರುಶಿಷ್ಯರುಗಳ
ತೇಜವಾಗೆ ಪರಚಿತ್ತಗ್ರಸಿಷ್ಣು
ಹರಸಲಿದನು ಶ್ರೀ ವಿಕ್ರಮ ವಿಷ್ಣು.

# ರಸ ಸರಸ್ವತಿ

೧

ಭವದ ಮೇಲಿಂದೆಮ್ಮ ಭಾವದೊಳು ಸಂಚರಿಸಿ
ನುಡಿನುಡಿಯ ಕೇಂದ್ರದೊಳು ರೂಪುಗೂಡಿ
ಅಕ್ಷಾಕ್ಷದಸ್ಪಷ್ಟಸೃಷ್ಟಿ ವಿಸ್ಫುಟವಾಗಿ
ಪ್ರತ್ಯಕ್ಷವಾಯಿತೆಸೆ ಮಾಯೆ ಹೂಡಿ
ಈ ಲೋಕದಾಲೋಕ ಬೇರೆ ಲೋಕದವೆನ್ನೆ
ಸಕಲ ಸದ್ಯೋಜಾತವಾದುವೆನ್ನೆ
ಕಾಲದುಪಹತಿಶಮಿಸಿ ನವ್ಯವೆನಿಸಿ
ಭೌತ ಋತದಿಂ ರಸದ ಋತಕೆ ಸಲಿಸಿ
ನಿಯತಿಕೃತಿಗೀತೆರದಿ ನರನಾತ್ಮರಸಮಧುರ-
ಪರಿಕರ್ಮವನುಗೊಳಿಸಿ ಬಗೆಯ ಕೊಳುವ
ಕವಿಮರ್ಮವೇ ನಿನ್ನ ವಿಪ್ರೊಗಳುವ!

೨

ನಿರ್ಜೀವದಿಂ ಜೀವದಚ್ಚರಿಯಿನೊಗೆದಂತೆ
ಜೀವದಿಂದೊಗೆತರುವ ರಸದಚ್ಚರೀ,
ಕಾಲದೇಶವ ರಚಿಪ ಭೂತಾತ್ಮಯೋಗದಿಂ-
ದುದಿಸಿಯೂ ಹೊರತವಕೆ ನೀ ನಚ್ಚರಿ.
ನಡೆವೆಡೆಗೆ ನಡೆತರುವ ರವಿಯ ತೆರ ರಾಮಾದಿ
ಮರ್ತ್ಯರೆಮ್ಮನು ಜನ್ಮಜನ್ಮದೊಳಗೆ
ಅದ್ಯಬಂಧುಗಳಂತೆ ಸಮ್ಮುಖದೊಳಿರುವ ತೆರ
ಮರ್ತ್ಯತೆಯ ತೊಡೆವೆ ತ್ವನ್ನಭದಿ ತೊಳಗೆ.

ಕರ್ಮಸಾಕ್ಷಿಯವೆಂದೊ ಜೀವನಿಧಿಯಿಂದೆತ್ತಿ
ಸುರಿಸಿದನುಭವರಸವ ಹನಿಯ ಕೊಂಡು
ಜೀವವಾತ್ಮವ ತಳೆವ ನೋವನುಂಡು
ಹದುಳವನು ಗಳಿಸೆ ಕವಿ ಹೃದಯರಸಲೇಪದಿಂ
ಹದಗೊಳಿಪ ನವಣಾವ ಕಾಂತಿಯಿಂದ
ಕಾಣ್ಕೆ ಶಿವಶಿವಮೆಂಬ ಲೇಸಿನಿಂದ
ಕ್ಷಣದ ಚಿಚ್ಚಲಕಾಂತಿ ನಿತ್ಯಚಲವಾದುವೆಸೆ
ಚಿತ್ರಚಿತ್ತವ ರಮಿಸಿ ಹೊಳೆವೆ ರಸವನ್ನೇ,
ಹೊಸ ಬೆಳಕನೇ ಲೋಕಕೆರೆವ ಕವಿಕನ್ನೇ.

೩

ಪರಿಗಣನ ಮೌಲ್ಯದೀ ವಿಜ್ಞಾನಲೋಕದಿಂ
ಗುಣಮೌಲ್ಯದೊಳಜಗವ ನಿರ್ಮಿಸುವ ತಾಯೆ,
ಮೃಣ್ಮಯಪ್ರಕೃತಿಯಿಂ ಮನೋವಿಕೃತಿಯ ರಚಿಸು-
ತಾತ್ಮವಿಸ್ತಾರವನು ಕಲ್ಪಿಸುವ ಮಾಯೆ,
ಮರವೆಂದು ಮಲೆಯೆಂದು ತೊರೆಯೆಂದು ದರಿಯೆಂದು
ಕಾಸೆಂದು ಬಾನೆಂದು ಹೊರಗ ತೋರಿ
ಪದ ಸಹಜಶಕ್ತಿಯಿಂದಿಂದ್ರಿಯಾರ್ಥವ ಬೆಳಗೆ
ಬೆಳಗುವರ್ಥಗಳೆಲ್ಲ ಬಗೆಯ ತೋರಿ
ಮೂರ್ತದಿಂದಲಮೂರ್ತ ಛಂದದಿಂ ಸ್ವಾಚ್ಛಂದ್ಯ
ವೃತ್ತಿಯಿಂ ನಿರ್ವೃತಿಯು ದೊರೆಯುವಂತೆ
ಅರ್ಥದೊಳು ರಮಿಸಿಯೂ ವಿರಮಿಸದ ತೆರದೊಳಗೆ
ಭಾವಸಾರಥ್ಯದೊಳೆ ಚರಿಸುವಂತೆ
ನುಡಿಯ ಬಳಸುವ ನಿನ್ನ ಚದುರೆ ಚದುರು
ಜಗದೊಳಾವೆಡೆಯಿಲ್ಲ ನಿನ್ನ ಸದರು?

ನೀ ಕೊಟ್ಟ ಪದವಿಯೆನೆ ನಿನ್ನ ಬಿರುದನು ಹೊತ್ತು
ನಿನ್ನ ಮಹಿಮೆಯ ಮೆರೆವ ಮೈಮೆವೆತ್ತು
ಲೋಕ ನಿರ್ಲಕ್ಷಿಸುವ ಕ್ಷಣದ ಸಂಭೂತಿಗಳು
ಸಕಲ ಶೃಂಗಾರದೊಳು ಪದವನರಿತು
ಅಗ್ರದೊಳು ಗಮಿಸುತಿರೆ ಉಚಿತವರಿತು
ನಾಮರೂಪದ ಲೋಕ ವಿಭ್ರಮಿಸುವಂದ
ಶಬ್ದಾರ್ಥ ಸಂಚಲನೆಗನುವಾಗ ಛಂದ
ಕವಿಯಾತ್ಮರಥವೇರಿ ಸಹೃದಯಮನಃಪಥದಿ
ಉತ್ಸವಿಪೆ ಇಹದರಿವ ಸ್ತಬ್ಧಗೊಳಿಸಿ,
ಸ್ವಪ್ನವೆನೆ ಜಾಗರವ ಚಕಿತಗೊಳಿಸಿ.

೪

ರಸಸರಸ್ವತಿ, ದೇವಿ, ಕವಿಯಿಷ್ಟಸ್ವಪ್ನವೇ,
ಕವಿಯ ಹೃತ್ಕುಹರದಿಂ ರಸಿಕಜನ ಹೊರತೆಗೆವ ಭವರತ್ನವೇ,
ಒಳಹೊರಗ ಬೆರೆಸಿ ದಿಗ್‌ಭ್ರಮೆಗೊಳಿಸುವಪ್ಸರೀ,
ಇಂದ್ರಿಯಮನೋಬುದ್ಧಿಧೃತಸತ್ಯಮತ್ಸರೀ,
ಈರೇಳು ಲೋಕಗಳ ಈ ಲೋಕದಿಂವೆತ್ತಿ ಪದಗೊಂಡ ವಿಕ್ರಮೇ,
ತುಳಿಯುವೆಡೆ ಚಿಲುಚಿಲುವ ಕೊನರಿಸುತ ಜಗದೊಲವ ಕೊಳುವ ಹೃದಯಂಗಮೇ,
ವಿಟ, ವೇಶ್ಯೆ, ಜೂಜಾಳಿ, ಕಳ್ಳ, ಲಂಪಟ, ಕುಡುಕ
ಕುಲಟೆ, ಪಾದರಿ, ಸುಳ್ಳಿ, ಧೂರ್ತ, ವಂಚಕ, ಕಡುಕ.–
ಹೆಸರಿಸುವುದೇನೆಲ್ಲ ಧರ್ಮಜ್ಞ ಧಿಕ್ಕೃತರ ಪತಿಕರಿಪ ತೆರದೆ
ಸಹೃದಯಾನಂದದೊಳು ನಿಷ್ಕೃತಿಯ ವರವೀವ ವರದೆ,
ಇರವಿಗೀತೆರವೆಂಬ ನೈತಿಕರ ನಗುವ ಸರಸೇ,
ಭೂಮವೇ ಸುಖವೆಂಬ ಕ್ಷುದ್ರವಿರಸೇ,
ಅನುಭವಗಳಿಂಗಡಲಿನಡಿಗಡಿಗೆ ದೇದೀಪ್ಯ ಸೃಷ್ಟಿಗಳ ಸೃಷ್ಟಿಸುವ ಚಿನ್ನೆ

ದೇವದಾನವಮುಗ್ಧ ದುಗ್ಧಾಬ್ಧಿಯಿಂ ದಿವ್ಯವಸ್ತುವಯಗಳಿನ್ನು
ತೀರಿಲ್ಲವೆನ್ನೆ,
ಭೌತಧರ್ಮಕೆ ಭಾವಧರ್ಮಗಳ ಹೊಂದಿಸುತ ಸೌಂದರ್ಯಶಿವವನೀ
ತಿರೆಗೆರೆವ ಭದ್ರೆ,
ಕವಿವತ್ಸವ್ಯಾಜದಿಂ ನಲವಿನಸ್ಮೃತವ ಕರೆದು ಸಕಲರಾತ್ಮವ
ಪೊರೆವ ಸರ್ವಾದ್ರೇ,
ಗಂಗೆಯೆನೆ ಯಮುನೆಯೆನೆ ಗೋದೆ ಕಾವೇರಿಯೆನೆ
ದಿವ್ಯ ಹಿಮಗಿರಿಯೆನ್ನೆ, ಕಾಶಿಯೆನೆ ಕಾಂಚಿಯೆನೆ
ಬಗೆಯಮಂಗಳ ಹಿಂಗೆ
ಕಮ್ಮಿದಲ್ಪೇತಿರವು ಹೊಂಗನಸಿನಿಂ ಹೊಂಗೆ
ಹೊಳೆಹೊಳೆಗು ಮಲೆಮಲೆಗು ಊರೂರಿಗೂ ಪ್ರೇಮ-
ರುಚಿಯಿತ್ತು ನಾಡಸೌಭಾಗ್ಯವನು ಕಲ್ಪಿಸುವ ವಾಣಿ,
ನೆನೆದೊಡನೆ ಮನದೆಲ್ಲ ಕಾರ್ಪಣ್ಯಗಳ ಹಿಂಗಿಸುವ ಕಲ್ಯಾಣಿ,
ಇರವಿನಾಂತರವಿಶ್ವದಾದಿಮಧ್ಯಾಂತಗಳನಾಳುತಿಹ ಪ್ರಕೃತಿ,
ಇಹವನಾಡಿಸುತಿರುವ ವಿಶ್ವಾತ್ಮಸೋಂಕೃತಿ,
ಭವಶರಧಿವೇಲೆ,
ನಿನ್ನ ನಾನೆರೆವೆನೌ, ಆಗೆನ್ನ ನಿರ್ವೃತಿಗೆ, ದೇವಿ, ಅನುಕೂಲೆ.

೫

ತ್ಯಕ್ತನೆನಿಸದೆ ನನ್ನ ನಿನ್ನಂಕಕೆತ್ತು,
ಯೋಗಿಯೆನಲೆನಗಾಗೆ ಮುದದ ಮತ್ತು.
ಮರದೊಳೆಲೆಯಾಡುತಿರೆ ತೆರೆ ಕೆರೆಯೊಳೋಡುತಿರೆ
ಮುಸುಡನೆತ್ತಿಹ ಮಳೆಯ ಕೋಡಕರುವನು ತಣಿಸೆ
ಮೋಡ ಮೊಲೆಯೂಡುತಿರೆ
ಹಚ್ಚಹಸುರಿನ ಮೇಲೆ ಬಿಸಿಲೊರಗಿ ಪವಡಿಸಲು
ಒಳಕಿರಣದಿಂ ಮಂಜುಹನಿ ಮಣಿಯ ಹುರುಡಿಸಲು

ಎಲರಬೆಯ
ಹೊಳೆಹರಿಯೆ
ಖಗದಿಂಚರಂ ಜೀವದುಚ್ಛ್ವ್ರತಿಯ ಸವಿಯೊರೆಯೆ
ಎಳೆಯರೆಳನಗೆಯಿಂದೆ ಮುದುನಗೆಯು ಚಿಗುರಿಡೆ
ತರುಣತರುಣಿಯರೊಲುಮೆಗಿಳೆಯೆಲ್ಲ ಹೊಗರಿಡೆ
ತಿರೆಯಹುಡಿ ರವಿಯೊಡನೆ ಕೆಳೆಬೆಳಸಿ ಸುತ್ತ ನಿರ್ವಿಷಯಕ್ಕೆ
ನೀಡುತಿರೆ ಶ್ಯಾಮರಸರಾಗದಾನ
ನಗರೋಪನಗರಗಳ ಯಂತ್ರಾಟ್ಟಹಾಸಗಳ ಗರವಕೊಳುತಿಗೆ
ನೀಲಮೌನ
ಹರಿಪದದ ಗಂಗೆಯೊಲು ಜಗದ್ಧಾತ್ರಿಯ ಕರುಣೆ
ಎದೆಯಮೊಗಕೊರಲಕ್ಕೈತೆಕ್ಕೆಯೊಳು ಮಲಗಿರುವ
ತಿರುಪೆಮಕ್ಕಳ ಸ್ವಾಪಸುಖದೊಳಗೆ ಹರಿಯುತಿಗೆ
ಕೋಗಿಲೆಯ ನಿಡುಸರಕೆ ಬಾನು ಕದ ತೆರೆಯುತಿಗೆ
ರವಿತೋರಿದೀ ಭವವ ಮಗೆಸಿ ನಿಶೆಯೈತರೆ
ಅಪ್ಸರೋಂತಃಪುರದ ಕಿಟಕಿಯಗೆತೆರೆದುದೆನೆ ತೋರಿಬರಲೆಳವೆಗೆ
ತನ್ನ ನಲ್ಲನನೆನ್ನ ಹೃದಯದೊಳು ಪುಡುಕುವೊಲು
ತುಡಿವ ಹೊಳಪಿನ ನೋಟವೆರೆಯುತಿರೆ ಕಿರುತಾರೆ
ಜಗವರಿವ ಮಾಗಿಸುವ ಜಗದೀಶ್ವರನ ರತಿಯ
ಬಗೆಗೆ ತರುವಂದದೊಳು ಮುಗ್ಧರುಲಿವ ಸ್ತೋತ್ರ
ಬುದ್ಧಿ ತರ್ಕದ ಹೆಡೆಯ ಮುಚ್ಚುವೊಲು ಕಿವಿ ಸಾರೆ
ಕಾಣದುದ ಕಾಣಿಸುವ ಮಧುರಸ್ವರಲಹರಿಯೊಳು
ಪುರುಷೋತ್ತಮಂ ಮೂಡೆ
ಎದೆಯೊಪ್ಪಿತಕೆ ಮತಿಯ ಹಸ್ತಾವಲಂಬದೊಲು
ಮೊಳಗುವ ಮೃದಂಗಮೊಳಗಗಜಾಧವಂ ಕೂಡೆ
ಕವಿಸೂಕ್ತಿಯೊಳು ನಿನ್ನ ದರ್ಶನಂ ಸಂಗಡಿಸೆ
ಸಚ್ಚಿತ್ತಮಧುಪಾನವೆದೆವಿಷಾದವ ಕೆಡಿಸೆ,

ಅಲ್ಲಿನಿಲ್ಲಿಂದಿಹದ ವ್ಯಾಪಾರವನು ನಿಲಿಸಿ
ಅರಿಷಟ್ಕ ಸಮೆವ ಸೆರೆಯಿಂ ಮವವ ಬಿಡಿಸಿ
ಕರಣಕಾತ್ಮವೆ ವಿಷಯವಾಮದೆನೆ ಕಂಡಕಂಡೆಡೆಯಲ್ಲಿ ಚೆಲುವನಿಂಸಿ
ಇಂಮುವರೆಗೆನ್ನನೀನಮೃತಕರದಿಂಪೆತ್ತಿ ಸ್ರೂರೆದ ತೆರದಿ
ಭವವನರಿತಪ ಮೀರಿ ನಿಲುವ ರಸಪವಕೆನ್ನ ಸಲಿಸು ಜವದಿ.

ನಿನ್ನ ದಯೆಯಿಂವೆನ್ನ ಮನಕಾಗಲೌ, ದೇವಿ
ಸತ್ಯಶಿವಸಂಜನಿತಸೌಂವರಮುದಾಗಮಂ
ನೀನೆಯುತ್ಸವಿಪಂತೆ ಪದಪದದಿ ನಡೆಯಲೌ
ವಸ್ತ್ವಾತ್ಮಮಧುರಸಮ್ಮಿಳನೋತ್ಸವಾಗಮಂ

ಜಗದಾತ್ಮ ಚಿತ್ರಿಸಲೌ ನಮ್ಮ ಕವಿಜನದ ಸೂಕ್ತಿಯಿಂದ
ನಿನ್ನ ಮರ್ಮವನರಿತ ಮೌಲ್ಯಜ್ಞ ಸಹೃದಯಾಸಕ್ತಿಯಿಂದ.

# ವಸಂತ ಚಂದನ

ವಸಂತ ಚಂದನ
ನಂದನಗಂಧವ ನಿಂದಿಸುತಿದ ಆ-
ನಂದದೊಳಂಜಲಿಯೊಳು ಕೊಳುವೆಲರಿನ—

ಅಲರಲರಿನ ಪರಿಮಳಗಳ ಮೇಳದಿ
ಮನಮನಗಳ ಹೊಗುತಲ್ಲಿ ಸುಮಾನದಿ
ದಿನವ ದಿನದ ಜಂಜಡದೊಳು ವೈಗರೆ-
ದಿಹ ಸಮ್ಮುದಗಳನೆಚ್ಚರಗೊಳಿಸುವ
ವಸಂತ ಚಂದನ

ಬಂಡೆಗಳೆವೆಬಿರಿಸುತ ಜೆಳೆಮೊತ್ತಿನ
ಹುತ್ತದ ನಾಗಗಳಪ್ಪುಗೆಕೆಳೆಯೊಳು
ಕಮ್ಮನೆಮರ ಮೈಗೊಂಡಿಹ ರಸದಿಂ-
ದೊಲುಮೆನಂಜ ಬಗೆಗೇರಿಸಕಲಿತಿಹ
ವಸಂತ ಚಂದನ

ಮಲೆತಲೆಮುಂಜೊಳು ಪಳಗಿಹ ಕರ್ಪೂ-
ರವ ಮೃಗಮದವುನ್ಮದಸುರಭಿಯ ಕಾ—
ಶ್ಮೀರವ ಕಂದರ ಲಕ್ಷ್ಮಿಯ ಕುಂಕುಮ-
ವೋ ಎನಲಚ್ಚರಿ ಕೇಸರಿಚರ್ಚೆಯ
ವಸಂತ ಚಂದನ

## ವಸಂತ ಚಂದನ

ನೀಲದ ತಂಪ ತರುವ ತೆಂಗಾಳಿ
ಚಂದನಗಂಧಕದರ ವೈಹಾಳಿ
ಕಾತರಿಸುವ ಕೋಗಿಲೆ ದನಿ ಕೇಳಿ
ಚಿತ್ತಕಿಟ್ಟ ಚಿತ್ತಜನಿದೊ ದಾಳಿ
ಕೊಳ್ಳಿರಿ ಚಂದನ

ತುಂಬಿದಿಂಪು ಬನಿ ಬಾಸಿಗೆ ಚಂದನ
ಹೂತ ಬನಕೆ ಹೂಧೂಳಿಯು ಚಂದನ
ಬಹುಮಹೋತ್ಸವಾವೋವಸ್ಯಂದನ
ಹೃದಯೋತ್ಸವಕೀ ವಸಂತ ಚಂದನ—
ಕೊಳ್ಳಿರಿ ಚಂದನ

ತೆರೆಗೆದೆಯನು ಘೂಮಾರಿಯು ಮುತ್ತಿಡೆ
ಬಾಂದೊರೆಯಂತೆಲರಂಗವನಪ್ಪಿಡೆ
ಉದಿತೋದಿತ ರಾಗವ ರೇಖಿಸುತ್ತೊಲು
ಚಂದನಕಾಗಲಿ ವಕ್ಷಸ್ಥಲವೆಡೆ—
ಕೊಳ್ಳಿರಿ ಚಂದನ

ಪ್ರತಿಘೋಷದ ಪ್ರತಿವೇದನಗೀತದ
ಸಂಶ್ರಿತಧರ್ಮಾಗಮಸೌಂದರ್ಯದ
ಹಸೆಯೊಸಗೆಯ ಚೆಲುವಿನ ಸಂರಂಭದ
ಸೆನಪ್ಪೊಳು ತೊಯ್ದ ಸುವರ್ಣವರ್ಣದ
ವಸಂತ ಚಂದನ

ಒಲಿವರೆ ನಮ್ಮೀವಸಂತ ಸಮಯಕೆ
ಸಿಂಗರ ಸಡಗರದೀ ಮಲೆಹುಳುವಿಗೆ

ಬೆಳುದಿಂಗಳ ಗುಡಿಗೋಪುರದೂರಿಗೆ
ಒಲಿವನೆ ರಸಸ್ವಾಯತ್ತಕೆ ಕೊಳ್ಳಿರಿ
ವಸಂತ ಚಂದನ

ಋತು ನಡೆಗೊಳಿಸುವ ಮಾಧವಲಾಸ್ಯವ
ಅನುವದಿಸುವ ತೆರ ಮನವನುಗೊಳಿಸುವ
ಪರಿಣಾಮಕೆ ಪರಿಮಳಿಸಿಹ ಪರಿಣತ
ಸೌಗಂಧದ ಪರಿಕರ್ಮವ ಸೇಹದಿ
ಕೊಳ್ಳಿರಿ ಚಂದನ

ಈ ಹಾಡಿನ ಬೇರು ನನ್ನ " ಈಚಲುಮರದ ಕೆಳಗೆ " ಎಂಬ ಪುಸ್ತಕದಲ್ಲಿನ ' ವಸಂತ ಚಂದನೋತ್ಸವ ' ಎಂಬ ಬಂಧದಲ್ಲಿದೆ.

# ದಶಾವತಾರ

ಹೃದಯಾವಕಾಶದೊಳು ಸಚ್ಚಿದಾನಂದವನು
ತ್ರಿದಶತ್ರಿವಿಷ್ಟಪರ ರೂಪದೊಳು ಮೂಡಿಸಿದ
ಪರಮ ಋಷಿದರ್ಶನಗಳಸ್ತಮಿಸೆ ಜಡಧಿಯೊಳು
ಕರುಣಿ ನೀನಾ ಜಡಧಿಗನುವಾದ ರೂಪಾಂತು
ಮೇಲಕೆತ್ತಿದೆ ವೇದರೂಪದೆಮ್ಮಾತ್ಮವನು.

ಬಾಳೊಳಮೃತಾನಂದ ಪಡೆಯುವಾತುರದಲ್ಲಿ
ವಿಷಯಾಬ್ಧಿಮಗ್ನಮತಿ ವೈಕ್ಲಬ್ಯವಡೆದಿರಲು
ಅಸಮಧೃತಿ ಬೆನ್ನಿತ್ತೆ ಕೂರ್ಮಸಂಕೇತದೊಳು.

ತನ್ನಹಂಕಾರಕ್ಕೆ ಸೃಷ್ಟಿಯೆಲ್ಲವ ನಿಲಿಸಿ
ನಿನ್ನಹಂಕಾರವನೆ ಧಿಕ್ಕರಿಪ ದುರ್ಮದವ
ಟೊಳ್ಳುಗೈಯಲು ತಕ್ಕ ಭೂದಾರನಾದೆಯೈ.

ಎಲ್ಲೆಲ್ಲು ನೀನಿಹುದು ಸುಳ್ಳೆಂದು ನಿನ್ನಿರವಿ-
ಗೆಲ್ಲೆಯನು ನಿರ್ಮಿಸುವ ಕ್ಷುಲ್ಲಮತಿಯೆಲ್ಲೆಗೆಡೆ
ಕಲ್ಲೊಳೂ ಮೂಡಿದೆಯ ನರಸಿಂಹ ತೇಜವೇ ?

ಇಳೆಮುಗಿಲಕೊಂಡರೂ ಒಳಗಕೊಳ್ಳದೆ ತಣಿಯೆ
ನೆಲೆಯ ಬೇಡುವೆನಲ್ಲೆ ಎನೆ ಬಲಿಯ ತುಳಿದೆಯಾ
ಸಕಲರಂತರ್ಯಾಮಿ ನೀನೆಯೆಂದರಿವರಿಯೆ ?

ಅಕಳಂಕನೇ, ಸ್ವಾಮಿ, ನರನು ಮಾನವನೆಂಬ
ಸಂಭಾವನೆಗೆ ಸಲುವ ಕಾಲದೊಳು ಪಶುತೋ–
ಜ್ಜೃಂಭಣವೆ ಪೌರುಷದ ಜಿಲೆಯಾಗೆ ಕ್ಷತ್ರಿಯರ

ಕಾಮದಿಂ ಮೂಡಿಬಹ ಕೋಪಾಗ್ನಿ ಎನುವಂತೆ
ಜಾಮದಗ್ನಿಯ ನೆವದಿ ತಿಸೆಯ ಪಾವಕನಾವೆ.

ಧರ್ಮಧವಳಾಚಲದಿ ಜನಿಯಾಂತು, ವಿಷ್ಣುಪದ
ಮರ್ಮರವನಿಳೆಯ ತಿಳಿವಿಗೆ ತಂದು, ಸಂಯಮದ
ಕೂಲದೊಳು ತ್ಯಾಗವೇಗದಿ ಹರಿದು ಭೋರ್ಗರೆದ
ಭಾರತದ ಬಾಳುವೆಯ ಬಿತ್ತರದ ತೀರ್ಥನೇ,
ಶ್ರೀ ರಘೋತ್ತಮ, ನಿನಗೆ ಮಂಗಳವ ವಚಿಸುತ್ತ
ಗೆಲವಾಗುವೆನು ತಂದೆ.
ಪಡವ ಮೀರಿತೊ ಏನೊ
ನಲವಿನಿಂಗಡಲೆಂದು ತಿರೆಯ ಜನರುತ್ಸವಿಸೆ,
ಹೊಲ್ಲರುಲ್ಲಸಗೆಡಲು, ಬಲ್ಲ ಜನ ಬೆರಗಾಗೆ
ಎಲ್ಲ ಬಾಳಿನ ದಗೆಯ ತಣಿಸಿದಾಪದ್ಬಂಧು,
ನೀರದ ಶ್ಯಾಮನೇ, ಭವಿಗೆ ಭವದುತ್ಸಾಹ
ತೀರದಿರುವಂದದೊಳು ಕರ್ಮರತಿಯನು ಹೊಗಳಿ
ಫಲವಿರತಿಯಿಂದವರ ಕಹಿಯನೆಲ್ಲವ ಕಳೆವ
ಸುಲಭಮಾರ್ಗವನರುಹಿ ನಡೆದು ತೋರಿದ ಧೀರ,
ಎನಿತು ಶುಭಗಳ ತಂದೆ ನೀನೆಮ್ಮ ತಾಯ್ನೆಲಕೆ
ಎನಿತೆತ್ತರಕ್ಕೊಯ್ದೆ ನೀನೆಮ್ಮ ಜೀವಿತವ!

ಸ್ವರವಿಲ್ಲವೆಯೆ ಗಾನ, ಮಲರಿಲ್ಲವೆಯೆ ಕಂಪು
ಕರಣ ವಿಷಯಗಳೊಂದುಗೂಡದೆಯೆ ಸೊಗದುಣ್ಮು
ದಾಹವಿಲ್ಲವೆ ತಣಿವು, ದೇಹವಿಲ್ಲದೆಯಿರವು—
ಸ್ನೇಹಮಯ, ನೀನಿಂತು ಯಾವ ನಿಲುವೊಳು ನಿಂದು
ಯಾವ ದರ್ಶನ ಬಲದೊಳಾವ ಭ್ರಮೆಯನು ಗೆದ್ದು
ಯಾವ ನಲ್ಮೆಯ ನೆಲೆಗೆ ತಿರೆಬಾಳನೊಯ್ಯಲೆಂ-

ದೆಂಥ ಪಂಥಕೆ ಸಂದೆ? "ಎಲ್ಲ ನಶ್ವರವಿದರ
ಅಂತ್ಯವೆಂಥಮೊ ಕಾಣೆ ; ಜೀವ ಜೀವವ ಕಾಡಿ
ಜೀವಿಸುವುದೇತಕ್ಕೆ ; ದುಃಖಮಯದೀ ಭವದಿ
ಬೇವ ಗಾವಿಲ ನಿನ್ನ ನಿರ್ವಿಣ್ಣತೆಗೆ ಮುಕ್ತಿ
ನಿರ್ವಾಣವೆಂದೆ ತಿಳಿ ; ಸರ್ವಕಾಮವ ಕಳೆ ;
ದುರ್ವಾರವೆನಿಸುವೀ ಹುಟ್ಟುಸಾವನು ಶಮಿಸಿ
ಸುಜ್ಞಾನಿಯಾಗುವೊಡೆ ಭವದಾಸೆ ಹಿಂಗಿಸು ;
ಅಜ್ಞರಾಚರಿಸುತಿಹ ಯಜ್ಞಮಾರ್ಗವ ಬಿಡು."
ಪಾರ್ವರನು ದಮಿಸಿದನೆ, ಅತಿಲೋಲುಪತೆಗಿಂಥ
ಸರ್ವಾಪಹರತತ್ವವೆಳತವೇ ಬೇಕಾಯ್ತು
ಜೀವನವನುದ್ಧರಿಸೆ ಮೋಹಾಂಧಕೂಪದಿಂ
ನೋವು ನಲವೊಳಗಮವು ಸಮತೂಕವೊಳು ತೂಗೆ?

ಇಂದುವರೆಗಿಂತಾಯ್ತು ನರನಾತ್ಮದುದ್ಧಾರ
ನಂದುವಂತಿರೆ ಧರ್ಮ ತಿರೆಗೆ ಶಿವದವತಾರ.
ಮುಂದೆ ದಣಿಯೆಂತೊಲಿವನೀ ಧರೆಯ ಜೀವಕ್ಕೆ ?
ಕುಂದ ಕಳೆವೆಮಗೀವನಾವ ಹದುಳದ ಬಿಕ್ಕೆ ?
ಮುಟ್ಟಿದುದ ಸುಡುವಂಥ ವರವ ಪಡೆದವನಂತೆ
ಸೃಷ್ಟಿಯನು ಕೆಡಿಸುತಿರೆ ಈಹೆ ಅಸುರನಹಂತೆ
ದುರ್ಮದಾವೇಗಗಳ ಯಂತ್ರದೈತ್ಯನು ಗಳಿಸೆ
ಧರ್ಮಗಳು ಧೂಳೀಳಿ ಕಾಮಪಥದೊಳು ಚರಿಸೆ
ಕುದುರೆ ಆಳಿಬ್ಬರೂ ಉನ್ಮತ್ತರಾದವೋಲು
ಹದುಳ ಕೆಟ್ಟಿರೆ ಲೋಕ ಇಂದ್ರಿಯೋನ್ಮಾದದೊಳು
ದುಜ್ಞೇಯನೇತೆರದಿ ತಿರೆಯ ತಿಳಿವಿಗೆ ಬರುವ ?
ವಿಜ್ಞಾನ ಬಲಿಯಿದಿರು ಯಾವ ಬಿಕ್ಕೆಯನೆರೆವ ?

ಜಡಕೆ ಕಿಂಕರನಾಗಿ ಬಳಲಿ ದೆಸೆಗೆಟ್ಟಿರುವ
ಬಡ ಚೇತನನಿಗಾವ ಬಗೆಯ ಬೆಂಬಲವೀವ ?
ಚಪಲಜಂಗಮಜಗಕೆ ಚಪಲಾಶ್ವವನೆ ಏರಿ
ಉಪಶಮಿಸ ಬರುವನೋ ಪರಮರೌದ್ರವ ಬೀರಿ
ಜಗದವಲಯದ ಮೇಲೆ ಕರವಾಲವನು ಬೀಸಿ
ಯುಗದ ಪಾಪವ ಕೆಡಿಸೆ ಕ್ಷೀರಜಲಧಿನಿವಾಸಿ ?
ನಡುಗುತ್ತಿನ್ನೆದೆ ನೆನೆವುದಾ ಭೀಮಭಯಕರನ
ನುಡಿಯರಿಯದಳಲುತಿದೆ ಅವನ ನುತಿಸುವ ಹದನ.

# ‘ನರಸಿಂಗ’ ನಿಗೆ ಮರುಳಾದ ಮಗಳು

( ಭಗವನ್ಮೋಹಾವಿಷ್ಟಳಾದ ಮಗಳನ್ನು ನೋಡಿ ತಾಯಿಯ ಮಾತು )

(ನಮ್ಮಾಳ್ವರ್ರವರ ಸಿರಿಬಾಯಿನುಡಿಯ ಎರಡನೆಯ ಶತಕದ ನಾಲ್ಕನೆಯ ದಶಕ)

೧

ಆಡಿಯಾಡಿ ಮನಕರಗಿ ಹಾಡನು
ಹಾಡಿ ಹಾಡಿ ಕಂಬನಿಕರೆವೆಲ್ಲೆಡೆ
ನೋಡಿ ನೋಡಿ ನರಸಿಂಗಾ ಎನ್ನುತ
ಬಾಡಿ ಹೋದಳೀ ಕಳೆಮೊಗದವಳು

೨

ಏನನರಿಯದೀ ಚೆಲುಮಗು ನಿಮ್ಮನು
ಕಾಣುವಾಸೆಯೊಳು ಸೊರಗಿರೆ, ಬಲ್ಮೆಯ
ಬಾಣನ ಸಾಸಿರ ತೋಳ್ ತರಿದ ನೀವು
ಕಾಣಿಸಿಕೊಳ್ಳಲು ದಯೆತೋರಿದಿಹಿರೇ !

೩

ಕೊರಗುವ ಮನಮೊಳು ಜೆಂಕಿಯ ಬಳಿಯೊಳು
ಅರಗು ಮೇಣಮೊಲು ಕರಗುವಳಿವಳು
ಮರುಕವಿಲ್ಲ ನಿಮಗಿದಕೇಗೈಯಲಿ
ದುರುಳನ ಲಂಕೆಯನಳಿಸಿದ ನಿಮಗೆ.

ಎಂಬಳು ಲಂಕಾಹರನೇ, ಮತ್ತೆಯು
ಎಂಬಳು ಗರುಡಧ್ವಜನೆ, ಎನ್ನುತ
ಹಂಬಲದೊಳು ಬಿಸುಸುಯ್ವಳು ಕಂಬನಿ
ತುಂಬುತ ಕೈಮುಗಿವಳು ಭ್ರಮಿಸೆದ್ದು.

೫

ಇರುಳೂ ಹಗಲೂ ನೆನೆನೆನೆದೊರಲುತ
ತರುವಳು ಸೈದಿಲೆ ಕಣ್ಣಿಗೆ ಹನಿಯ
ತೆರುವುದಿಲ್ಲ ನೀವಳಿಗಳು ಮುತ್ತುವ
ವರ ತುಳಸಿಯನಹ ಶುದ್ಧರ ಕೃಪೆಯೇ !

೬

ಮರುಕವುಳ್ಳವನೆ ಎಂಬಳು ಮತ್ತೆಯು
ಹಿರಿಯಾಸೆಯ ಹೊರೆವವನೇ ಎಂಬಳು
ಇರವು ನನ್ನದಿವರವ್ಯತವೆ ಎಂಬಳು
ಕರಗಿಸಿ ಮನವನು ತನ್ನೊಳೆ ನಿಂದು.

೭

ತಾ ಪಡುತಿಹ ಮೋಸವ ಮರೆಮಾಚುತ
ತಾಪದಿ ತಾರಿರೆ ತನ್ನೊಳಗಿವಳೆ-
ನ್ನಾಪದ್ಬಂಧುವೆ ಕೃಷ್ಣಾ ಎಂಬಳು
ಆಪೂರ್ಣಾಂಬುಧಿ ಶಯನಾ ಎಂಬಳು

೮

ಎಲೆ ವಂಚಕ ಎನುವಳು ಕೈಮುಗಿವಳು
ಬಲು ಬೆಂದಿರುವೆವೆಯೊಳು ನಿಡುಸುಯ್ವಳು
ಬಲಿ ಕಂಸನ ವಂಚನೆಗೈದವರೇ
ಅಳಲೇನೆಂಬೆನು ನಿಮಗೊಲಿದಿವಳ.

೯

ಇರುಳಾದುದ ಹಗಲಾದುದನರಿಯಳು
ಆರಳಿ ಜೇನ್‌ಸುರಿವ ತುಳಸಿಯನೆರೆವಳು

ಉರಿವ ಮೊನೆಬಾಯ ಚಕ್ರಧರರೆ, ನಿ-
ಮ್ಮರಿವೆಂತಿಹುದೀ ಚಪಲೆಯ ಕುರಿತು.

೧೦

ಮಿಗಿಲಿಲ್ಲದ ಚೆಲುಕಣ್ಣಿಗೆ ಚಂಚಲೆ
ಹಗಲಿರುಳೂ ನೀರ್ ತರುವಳು ದೀನೆ
ಮಿಗು ಬಾಳುರಿಪ್ರೋಲು ಲಂಕೆಯಳಿಸಿದರೆ
ಮೃಗಲೋಚನಗಳನೀಕೆಯವುಳಿಸಿ.

೧೧

ಬಾಡದ ವರಗುಣಗಳ ವಾಮನನ
ಹಾಡೊಳು ಸಿರಿಶಡಗೋಪನುಸಿರಿದ
ಹಾಡಿನ ಸಿರಿ ಸಾಸಿರದೊಳು ಹತ್ತಿವು
ಸೂಡಲಡಿಗೆ ಚೆಲುವಾದುದು ಮಾಲೆ

# ಚೆಲುವ ನಾರಾಯಣ

(ಆಳ್ವಾರರ ಬಗೆಯನ್ನು ಭಗವಂತನು ತುಂಬಿ ನಿಂತುದನ್ನು ಕುರಿತ ಹಾಡು)

( ಸಿರಿಬಾಯಿ ನುಡಿಯು ಒಂದನೇ ನೂರಿನ ಹತ್ತನೇ ಹಾಡು )

೧

ಅರಿಶಿರಗಳನು ತರಿವ ಮಾಶಂಖ ಚಕ್ರಗಳ ಧರಿಸಿದವನು
ಸಿರಿಯ ಚೆಲುನೀಳಡಿಯಸೇಳು ಲೋಕಗಳಾವರಿಸುವಂತೆ
ತರಳನಿಂಥವನಿಲ್ಲವೆನುವ ವಾಮನನಾಗಿ ವರ್ಧಿಸಿದವ
ಕರಿಯ ಮಣಿಯಂದ ಕಂಗೊಳುವನಿವನೆನ್ನ ಕಂಗಳೊಳೆ ನಿಂತ.

೨

ಕಂಗಳೊಳಗೆಯೆ ನಿಲ್ವನಿವನನಾವೆರೆಯೆ ಕಾದಕ್ಕೆಯಿಂದ
ಸಂಗಡಿಸುವನು ನೆನೆಯೆ—ಇನ್ನಿವನ ನಾವೇನ ಬೇಡಲಹುದು
ಹೊಂಗುವುರಿ ತಾನಾಗಿ ನಲ್‌ಗಾಳಿ ನೀರಾಗಿ ಬಾನುಮಾಗಿ
ಮಂಗಳದ ನೆಲವಾಗಿ ಬಿತ್ತರಿಸುವೀ ನಮ್ಮ ನಾಥನನ್ನು ?

೩

ನಾಥನಿವ ನಮಗೆನ್ನ ತಂದೆಗೂ ತಾತನಿಗು ಮುತ್ತಜ್ಜಗೂ
ನಾಥನಿವ ತಣ್ಣನೆಯ ಚಂದಾವರೆಯ ಚೆನ್ನ ಕಂಗಳವನು
ನಾಥನುರದೊಳು ಲತೆಗು ಹಾವಿಗು ನುಣ್ಣ ನಡುವವಳ ತಳೆದ
ನಾಥನೆಮ್ಮವನಿವನ ಬಿಡವೆ ಧರಿಸೌ ನನ್ನ ಮುಗ್ಧ ಹೃದಯ.

೪

ಹೃದಯವೇ ನೀನೊಳ್ಳಿಯವಳೊಳ್ಳಿಯವಳೌ ನಿನ್ನ ನೆರವಿಂ
ಅದನದಾವುದ ಗೈಯೆವಿನ್ನೆಮಗೆ ಏನುಂಟು ಆವ ಕೊರತೆ ?
ಹದಗೆಡದ ಹರೆಯದವ, ಮಲರಮಗಳಾಣ್ಮನವ, ನೀನವನನು
ಹೊದದೆ ಇರು ಬಿಡದೆ ನಾನರಿವುಗೆಟ್ಟಿರುವಂದಿಗೂ ಕಂಡೆಯಾ.

೫

ಕಂಡೆಯಾ, ಎಲೆ ನನ್ನ ಹೃದಯವೇ, ಕರ್ಮಗಳು ಫಲಿಸುತಿಹುದ
ಕೊಂಡೆಣಿಕೆಯಿಲ್ಲದೆಯೆ ತಾವಾಗಿ ಫಲಗಳನು ಬಿಡುವ ತೆರವ
ಉಂಡವನನೇಳು ಲೋಕಂಗಳನು, ತೊಡೆಯಿರದ ಮೂರಡಿಗಳ
ಕೊಂಡೆಲ್ಲವಳೆದವನ ಕಂಡುಕೊಂಡಿಹೆಯಲಾ ನೀನುಮಿಂದು ?

೬

ನೀನುಮಂತೆಯೆ ನಾನುಮೀಸೇರನಿಂತಿರಲು ಇನ್ನು ಮುನ್ನು
ಏನೊಂದು ನೋವನೂ ಬಳಿಸಾರಗೊಡ, ಕೇಳು, ನನ್ನ ಮನವೇ
ತಾನೆ ತಾಯಾಗಿ ತಂದೆಯುಮಾಗಿ ಈ ಲೋಕಮೊಳಗೆ ಮೈಯ-
ನಾನುವೀಶನು ಮಣಿಯ ಬಣ್ಣ ಮೊಡಲಿನ ಚೆಲುವ ನನ್ನ ತಂದೆ.

೭

ತಂದೆಯೇ ಎಂದೆನುತ ನನ್ನೊಡೆಯ ಎನ್ನುತ್ತ ನೆನೆದು ಮನಕೆ
ತಂದಿಟ್ಟುಕೊಳ್ಳುತ್ತ ಸೊಲ್ಲಿನೊಳು ಮೊರೆಯಿಡುವ ಪಾಪಿ ನಾನು
ತಂದೆಯೇ ನಮ್ಮೊಡೆಯ ಎನ್ನುತ್ತ ಬಾನವರು ನೆನೆದು ಮನದಿ
ತಂದಿಟ್ಟುಕೊಳ್ಳುತ್ತ ಸೊಲ್ಲಿನೊಳು ಕೊಂಡಾಡುವೀ ಚೆಲುವನನ್ನು.

೮

ಚೆಲುವ ನಾರಾಯಣಾ ಎಂಬ ಸೊಲ್ಲೆನ್ನ ಕಿವಿಸೋಕೆ ಸಾಕು
ಮಳಮಳನೆ ಕಣ್ಣ ಹನಿಯುದುರುವುದು ಹುಡುಕುವೆನು—
ಸೋಜಿಗವಿದು !
ನಲುಮೆಯಿರುಳೊಳಗಂತೆ ಹಗಲೊಳೂ ಎಡಬಿಡದೆ ಒಡಗೂಡುತ
ಒಲುಮೆಯಿಂದೀ ಪೂರ್ಣನೆನ್ನ ಬಿಡದಿರುವನೈ ನನ್ನ ನಂಬಿ.

೯

ನಂಬಿಯನು ಸಿರಿಕುರುಂಗಡಿಯೆಂಬ ಪುರಮೊಳಗೆ ನಿಂತವನನು
ಚೆಂಬೊನ್ನಿನಂತೆಯೇ ಹೊಳೆಯುತಿಹ ಸಿರಿಮೂರ್ತಿಯುಳ್ಳವನನು

ಚೆಂಬೊಗರ ತಳಿಪವನ ಮೋಗಳಿನ ಬಾನವರಿಂಗಾದಿಮನನು
ಎಂಬೆ ನಾನೇನೆಂದು ನನ್ನೊಡೆಯಗೇನೊರೆದು ನಾ ಮರೆವೆನು ?

೧೦

ಮರವೆಯಿದು ಅರಿಮೆಯಿದು ಎಂದು ನಾನೊಂದನೂ ತಿಳಿವರಿಯೆನು
ಮರೆವನಿವನೆಂದೆಯೋ ಚೆಂದಾವರೆಯ ಚೆಲುವ ಕಂಗಳಾಂತು
ಮರವೆಯುಳಿವಂತೆನ್ನ ಹೃದಯದೊಳು ನಿತ್ಯವೂ ನೆಲಸಿರುವನ
ಮರೆವೆನೇ ನಾನಿನ್ನು ನನ್ನ ಈ ನೀಲಮಣಿಯಂದದವನ.

೧೧

ಮಣಿಯನ್ನು ಬಾನವರ ನೆರೆಯ ನಡಸುವನನ್ನು ತನಗೆ ತಾನೆ
ಎಣೆಯಾದ ಒಡವೆಯನು ಚೆಲುವು ಕುರಕೂರವನು ಶಡಗೋಪನು
ಅಣಿಗೊಂಡ ನುಡಿಗಳಿಂ ನುತಿಸಿರುವ ಸಾಸಿರದೊಳೀ ಪತ್ತನು
ದಣಿವಿಲ್ಲದಂದದೊಳು ಕಲಿವವರ ಕಲಿವು ಹಾಯುವುದು ನೆಲೆಗೆ.

# ಮೊದಲ ಚರಣಗಳ ಅಕಾರಾದಿ


| | ಪುಟ |
|---|---|
| ಅದಿಗೊ ಪೆಸೆಕೂಡುವೆಡೆ ತಿರೆಗೂಡುತಿದೆ ಮುಗಿಲು | ೩೬ |
| ಅರಿಶಿರಗಳನು ತರಿವ ಮಾರಂಕ ಚಕ್ರಗಳ ಧರಿಸಿದವನು | ೬೦ |
| ಅಜ ಬಿಡುವೆ, ಕ್ರಾಂತಿ ದಯಪಾಲಿಸಿದ ಸಲ್ವರವೆ. | ೩೧ |
| ಆಡಿಯಾಡಿ ಮನಕರಗಿ ಹಾಡನು | ೫೭ |
| ಇದು ಮೀಸಲೇ ನನಗೆ, ಈ ಬೆಳ್ಳಿ ಬಟ್ಟಲೊಳು | ೨೯ |
| ಇದುದೆನ್ನಲಿರವಿಲ್ಲ ಇಲ್ಲವೆನಲಿದುದಿರವು | ೨೩ |
| ಇಳೆಯೊಳು ನಿಂದಿಲ್ಲ | ೨೬ |
| ಈ ತಿಂಗಳು ಜನವರಿ | ೨೦ |
| ಈ ವಿದ್ಯಾಲಯದುತ್ಸವ ಸಮಯದಿ | ೩೯ |
| ಕಿರೀಟಪತಿಗಳ ರಾಜ್ಯವಿದಲ್ಲಿ | ೧೭ |
| ಗಡಬೆಳೆದು ಹುಡಿಗೂಡುತಿದೆ ಗುಡಿಯ ಗೋಪುರ | ೩೫ |
| ತುಳಿವ ರಭಸಕೆ ನೆಲವೆ ಬಿರಿವಂತೆ, ಬಿಡುಗಡೆಯ, | ೧೪ |
| ತೆರೆಗೆ ಸಂದಿತು ದಿನಕೆ: ನಿತ್ಯ ತುಂಬಿದುವ ಪ್ರಾಣ- | ೩೦ |
| ನೆನೆವೆನೀ ದಿನ ಪುಣ್ಯಜಾತನ ನಮ್ಮ ನಾಡಪಿತಾತನ | ೧೧ |
| ಪ್ರಣತಾರ್ತಿಹಂಕರದಿಂ ರಕ್ಷಿಸಿದ ಪಾದದವ | ೩೩ |
| ಬಂದಿತು ದೀಪಾವಳಿ ಮನೆಮನೆಯೊಳು | ೩ |
| ಬಾನು ತೆರೆದಿರೆ ತಿರೆಯು ತೊಯ್ದಿರೆ ಸೂರ್ಯ ತನ್ನನುರಾಗದಿ | ೫ |
| ಭವದ ಮೇಲಿಂದೆದ್ದು ಧಾವದೊಳು ಸಂಚರಿಸಿ | ೪೪ |
| ಭವನುತ್ಸವಾಗ್ರದೊಳು ಮೆರೆವ ಗಣಪತಿವರ್ಷದ | ೩೪ |
| ಮರುಗುವೆಯ ನೀ ಗೆಳೆಯ ನಮ್ಮ ನಾಡಿನ ಹಣೆಗೆ: | ೩೨ |
| ಮೆಲುಗಾಳಿಯೊಳು ಗಿಡಿಪೆರೆ ಹೊರಳೆ | ೩೭ |
| ವಸಂತ ಚಂದನ | ೫೦ |
| ಹೃದಯಾವಕಾಶದೊಳು ಸಚ್ಚಿದಾನಂದವನು | ೫೩ |
| ಹೊನಲಿನ ಗೆಲುವಿಲ್ಲದಕೆ | ೨೨ |

## ಗದ್ಯಚಿತ್ರಗಳು ಮತ್ತು ಕಥೆಗಳು

ರಾಮಾಚಾರಿಯ ನೆನಪು

ರಥಸಪ್ತಮಿ ಮತ್ತು ಇತರ ಕಥೆಗ

ಧ್ವಜರಕ್ಷಣೆ ಮತ್ತು ಇತರ ಕಥೆಗಳ

ಈಚಲುಮರದ ಕೆಳಗೆ

## ಅನುವಾದ

ಭಗವದ್ಗೀತೆಯ ಕನ್ನಡ ಪದ್ಯಾನು

# ಕೆಲವು ಹೊಸ ಪ್ರಕಟನೆಗಳು

| | | | |
|---|---|---|---|
| **ಕೃಷ್ಣಶಾಸ್ತ್ರೀ, ಎ.ಆರ್.** | | | |
| ವಚನ ಭಾರತ (ಎರಡನೆಯ ಮುದ್ರಣ) | ೬ | ೮ | ೦ |
| ಕಥಾಮೃತ | ೭ | ೮ | ೦ |
| ಭಾಸಕವಿ | ೨ | ೮ | ೦ |
| ಭಾಷಣಗಳು ಮತ್ತು ಲೇಖನಗಳು, ಭಾಗ ೧ | ೩ | ೦ | ೦ |
| ,, ,, ಭಾಗ ೨ | ೪ | ೦ | ೦ |
| **ಶ್ರೀಕಂಠಯ್ಯ, ಶೀ. ನಂ.** | | | |
| ಒಲುಮೆ | ೧ | ೮ | ೦ |
| **ನರಸಿಂಹಸ್ವಾಮಿ, ಕೆ. ಎಸ್.** | | | |
| ಉಂಗುರ | ೧ | ೪ | ೦ |
| **ಕೃಷ್ಣಮೂರ್ತಿ, ಕೆ.** | | | |
| ಕನ್ನಡ ಧ್ವನ್ಯಾಲೋಕ | ೫ | ೦ | ೦ |
| ಕನ್ನಡ ಕಾವ್ಯಾಲಂಕಾರ (ಅಚ್ಚಿನಲ್ಲಿ) | | | |
| ಪ್ರತಿಮಾ ನಾಟಕ ( ,, ) | | | |
| **ಪರಮೇಶ್ವರಭಟ್ಟ, ಎಸ್. ವಿ.** | | | |
| ಕನ್ನಡ ಕುಮಾರಸಂಭವ | ೨ | ೮ | ೦ |
| ಪ್ರೇಮಾರಾಧನ | ೨ | ೦ | ೦ |
| ಕನ್ನಡ ಮೇಘದೂತ | ೧ | ೦ | ೦ |
| **ಕೃಷ್ಣಮೂರ್ತಿ, ಎ.** | | | |
| ಪಾಂಪೆಯ ಕೊನೆಯ ದಿನಗಳು | ೧ | ೮ | ೦ |
| **ಸುಬ್ಬರಾವ್, ತ.ರಾ.** | | | |
| ರಕ್ತರಾತ್ರಿ | ೧ | ೮ | ೦ |

**ವಿವರಗಳಿಗೆ ಬರೆಯಿರಿ :—**

## ಶಾರದಾ ಮಂದಿರ

**೫೭೮, ಕೃಷ್ಣರಾಜವನಂ, ಮೈಸೂರು**